# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:02 • ಸಂಚಿಕೆ: 24 • ನೋಂದಣಿ ನಂ.:KARKAN27911 • ವಿಜಯನಗರ • 18.07.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 24 • Reg.No:KARKAN27911 • VIJAYANAGARA • 18.07.2024 • Thursday • Page:04 • Rs:2



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

75,000

HAMPI TIMES E-PAPER READERS

94486 33038

NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಮನಸ್ಸು ಮಾಡು
ಕರ್ತವ್ಯ ನಿಷ್ಟನಾಗು
ಕಾದು ನೋಡು

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!

ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ

SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

HAMPI TIMES VIJAYANAGARA

ಹಂಪಿ ಟೈಮ್ಸ್ ಇ-ಪೇಪರ್

94486 33038 | www.hampitimes.com / epaper.hampitimes.com | Vijayanagara | hampitimes@gmail.com



ಹಂಪಿ ಟೈಮ್ಸ್ ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಖಾಸಗಿ ಕೈಗಾರಿಕೆ, ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲು

## ಕನ್ನಡಿಗರ ಹಿತ ಕಾಯುವುದು ನಮ್ಮ ಆದ್ಯತೆ ಎಂದ ಸಿಎಂ

■ ಹಂಪಿ ಟೈಮ್ಸ್ ಬೆಂಗಳೂರು

ರಾಜ್ಯದ ಖಾಸಗಿ ಕೈಗಾರಿಕೆಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಿಗೆಶೇ.50ಹಾಗೂಆಡಳಿತಾತ್ಮಕವಲ್ಲದ ಹುದ್ದೆಗಳಿಗೆಶೇ.75ಮೀಸಲಾತಿನಿಗದಿಪಡಿಸುವ ವಿಧೇಯಕಕ್ಕೆ ಸೋಮವಾರ ನಡೆದ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ. ಕನ್ನಡಿಗರು ಕನ್ನಡದ ನೆಲದಲ್ಲಿ ಉದ್ಯೋಗ ವಂಚಿತರಾಗುವುದನ್ನು ತಪ್ಪಿಸಿ, ತಾಯ್ನಾಡಿನಲ್ಲಿ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂಬುದು ನಮ್ಮ ಸರ್ಕಾರದ ಆಶಯ. ನಮ್ಮದು ಕನ್ನಡಪರವಾದ ಸರ್ಕಾರ. ಕನ್ನಡಿಗರ ಹಿತ ಕಾಯುವುದು ನಮ್ಮ ಆದ್ಯತೆ ಯಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.



ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ವಿಧೇಯಕ ಜಾರಿಗೆ ತರುತ್ತಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡರು ಗುರುವಾರ ಅಭಿನಂದಿಸಿದರು. ಈ ಸಂದರ್ಭದಲ್ಲಿ ಕರವೇ ರಾಜ್ಯ ಉಪಾಧ್ಯಕ್ಷರಾದ ಅಶ್ವಿನಿ ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಸಣ್ಣೀರಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಅಬ್ಬಿಗೆರೆ ವಿನೋದ್ ಉಪಸ್ಥಿತರಿದ್ದರು.

# ಮೊಹರಂ ಕಾರ್ಣಿಕೋತ್ಸವ ಮಳೆ ಬೆಳೆ ಕಷ್ಟದಿಂದ

## ಸಂಪಾದಿತಲೇ ಸಂತೋಷದ ದೀನ್

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ



ತಾಲೂಕಿನ ಹಂಪಾಪಟ್ಟಣ ಮೊಹರಂ ಹಬ್ಬದ ನಿಮಿತ್ತ 2024ನೇ ಸಾಲಿನ ಶ್ರೀ ಚೌಡದಾಪುರ ಯಮನೂರು ಸ್ವಾಮಿಯ ಸೇವಕ "ಮಳೆ ಬೆಳೆ ಕಷ್ಟದಿಂದ ಸಂತೋಷದ ದೀನ್" ಎಂದು ಕಾಣಿಕೋತ್ಸವ ನುಡಿದರು...

ಹಂಪಾಪಟ್ಟಣ ಗ್ರಾಮದಲ್ಲಿ ಸುಮಾರು 40 ವರ್ಷಗಳಿಂದಲೂ ಮೊರಂ ಹಬ್ಬದ ಕತ್ತಲ ರಾತ್ರಿ ಹಬ್ಬದ ದಿನದಂದು ಹಂಪಾಪಟ್ಟಣ ಗ್ರಾಮದ ಚೌಡಾಪುರ ಯಮನೂರ ಸ್ವಾಮಿಯು ಆ ದಿನ ಕೆಂಡವನ್ನು ಆಯ್ದು ಸಿಡಿ ಕಂಬವನ್ನು ಏರಿ ಶಾಂತ ಚಿತ್ತತೆಯಿಂದ ಎಲ್ಲರನ್ನು ಗಮನಿಸಿ ಮೂರು ಬಾರಿ ಕಾರ್ಣಿಕೋತ್ಸವ ನುಡಿ ನುಡಿದು ಕೆಳಗೆ ಬೀಳುತ್ತಾರೆ... ಇದು ಹಂಪಾಪಟ್ಟಣ ಗ್ರಾಮದಲ್ಲಿ ಪ್ರತಿವರ್ಷ ನಡೆಯುವ ಮೊಹರಂ ಹಬ್ಬದ ವಿಶೇಷವಾಗಿದೆ. ಇದರ ಜೊತೆಗೆ ಸ್ವಾಮಿಯು ಗಂಗೆ ಕಾರ್ಯಕ್ರಮ, ನೀರಿನಲ್ಲಿ ದೀಪ ಹಚ್ಚುವುದು, ಪಟಾಕ್ಷಿ ಹರಾಜು ಕಾರ್ಯಕ್ರಮ, ಕಾರ್ಣಿಕೋತ್ಸವ, ಕೆಂಡ ಹಾಯುವುದು, ಮಕ್ಕಳನ್ನು ಕಿಚ್ಚಿಗೆ ಹಾಕುವ ಕಾರ್ಯಕ್ರಮ, ಉಡಿ ತುಂಬುವ ಕಾರ್ಯಕ್ರಮ ಆಲಾಯ ಕುಣಿತ ಹೀಗೆ ಸ್ವಾಮಿಯ ಮೊಹರಂ ಹಬ್ಬದ ಪ್ರಯುಕ್ತ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿದವು. ಈ ಸಂದರ್ಭದಲ್ಲಿ ಹಂಪಾಪಟ್ಟಣ ಗ್ರಾಮದ ಸದ್ಭಕ್ತರು, ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ, ಭಕ್ತಿ ಸೇವೆ ಸಲ್ಲಿಸಿದರು. ಹಂಪಾಪಟ್ಟಣದ ಮೋರಹಂ ಹಬ್ಬ ಆಚರಣೆಯು ರಾಜ್ಯದಲಿಯೇ ಅತ್ಯಂತ ವಿಶೇಷ ಎನ್ನುವುದು ಇಲ್ಲಿನ ಭಕ್ತರ ಅಭಿಪ್ರಾಯವಾಗಿದೆ.

**ಮೈಕ್ರೋ ನ್ಯೂಸ್**

# ವಿಕಲಚೇತನರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2022–23 ಹಾಗೂ 2023–24ನೇ ಸಾಲಿನ ಎಸ್.ಎಫ್.ಸಿ ಹಾಗೂ ನಗರಸಭೆ ಅನುದಾನದಲ್ಲಿ ಹೊಸಪೇಟೆ ನಗರದ ವ್ಯಾಪ್ತಿಗೆ ಬರುವ ವಿಕಲಚೇತನರಿಗೆ ತ್ರಿಚಕ್ರ ವಾಹನವನ್ನು ನೀಡುವುದಕ್ಕೆ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹರು ಆಗಸ್ಟ್ 10 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಸರ್ಕಾರದ ಸುತ್ತೋಲೆಯನ್ವಯ ಆಯ್ಕೆ ಸಂದರ್ಭದಲ್ಲಿ ಅತಿ ಕಡುಬಡವರಿಗೆ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಫಲಾನುಭವಿಗಳು ಕುಟುಂಬದ ಆದಾಯ ಕುರಿತು ಹಾಗೂ ಇತರೆ ಯಾವುದೇ ದಾಖಲಾತಿಗಳು ತಪ್ಪು ಮಾಹಿತಿ ನೀಡಿ ಯೋಜನೆಯ ಸೌಲಭ್ಯ ಪಡೆಯಲು ಮುಂದೆ ಬಂದಲ್ಲಿಅಂತವರವಿರುದ್ಧನಿಯಾಮಾನುಸಾರ ಅಗತ್ಯ ಕಾನೂನು ಕ್ರಮ ಜರುಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ www.hospetcity.gov.in ವೆಬ್ ಸೈಟ್ ಅನ್ನು ಸಂಪರ್ಕಿಸಿ ಮಾಹಿತಿಯ ವಿವರವನ್ನು ಪಡೆದು ಕೊಳ್ಳಬಹುದು. ಸೌಲಭ್ಯಗಳನ್ನು ಪಡೆಯಲು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳ ವಿವರವನ್ನು ನಗರಸಭೆ ನೋಟಿಸ್ ಬೋರ್ಡ್‌ನಲ್ಲಿ ಅಳವಡಿಸಲಾಗಿದ್ದು, ವಿಷಯ ನಿರ್ವಾಹಕ ಹತ್ತಿರ ಮಾಹಿತಿ ಮತ್ತು ಅರ್ಜಿ ಪಡೆಯಲು ಹೊಸಪೇಟೆ ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.


ಬೇಕಾಗಿದ್ದಾರೆ

Marketing Executive

> Any Graduate Can apply
> Good communication & Convincing skills
> Ability to work independently
> Freeshers are Invited

Attractive remuneration and Excellent career development opportunities wait to the right candidate

Job Location:
HOSAPETE - VIJAYANAGARA Dist.

94825 99089
94486 33038


ನೌಕರರ ಅಭಿನಂದನೆ ಸ್ವೀಕರಿಸಿ ಸಿಎಂ ಸಿದ್ದರಾಮಯ್ಯ ಹೇಳಿಕೆ

# ಜನರಿಗೆ ಯೋಜನೆ ತಲುಪಿಸಿ ವೇತನ ಪರಿಷ್ಕರಣೆಗೆ ಪೂರ್ಣ ಒಪ್ಪಿಗೆ 20 ಸಾವಿರ ಕೋಟಿ ರೂ. ಅಧಿಕ ಹೊರೆ



■ ಹಂಪಿ ಟೈಮ್ಸ್ ಬೆಂಗಳೂರು

ಸರ್ಕಾರದ ಯೋಜನೆಗಳನ್ನು ಪ್ರಾಮಾಣಿಕವಾಗಿ ಜನರಿಗೆ ತಲುಪಿಸುವ ಕಾರ್ಯ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಕುರಿತಾಗಿ 7ನೇ ವೇತನ ಆಯೋಗದ ಶಿಫಾರಸುಗಳನ್ನು ಸರ್ಕಾರ ಅಂಗೀಕರಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವ ಜೊತೆಗೆ ಸರ್ಕಾರದ ನಿಲುವುಗಳಿಗೆ ತಕ್ಕಂತೆ ಕಾರ್ಯ ನಿರ್ವಹಿಸಬೇಕು ಎಂದು ಕಿವಿ ಮಾತು ಹೇಳಿದರು. 7ನೇ ವೇತನ ಆಯೋಗದ ಶಿಫಾರಸುಗಳನ್ನು ಸರ್ಕಾರ ಪೂರ್ಣವಾಗಿ ಒಪ್ಪಿಕೊಂಡಿದೆ. ಇದರಿಂದ ಸರ್ಕಾರಕ್ಕೆ 20 ಸಾವಿರ ಕೋಟಿ ರೂ. ಹೆಚ್ಚಿನ ಹೊರೆ ಯಾಗಲಿದೆ ಎಂದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಘದ ಅಧ್ಯಕ್ಷ ಷಡಕ್ಷರಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.


SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಟನಾಗು – ಕಾದು ನೋಡು

SCAN & READ E-PAPER


## SUBJECT: ENGLISH

# A HERO

Read the following extracts and answer the questions that follow:-

**1. "Leave alone strength. Can you prove you have courage?**

a. What was the view of Swami's father regarding courage?
Swami's father felt that courage was more important than strength and age.

b. How did he want his son to prove that he had courage?
By sleeping alone in the office room.

c. Did he accept the challenge? If not why?
No, he did not accept the challenge. It was a frightful proposition

**2. "A frightful proposition"**

a. For whom was it a frightful proposition?
Swami.

b. What was frightful?
Sleeping alone in the office room was frightful.

c. Why was it frightful?
Swami always slept beside his granny. He could not sleep alone.

**3. "Courage is everything, strength and age are not important"**

a . Who is the speaker? /Who said this?
Swami's father

b .When did the speaker say so?
When Swami commented that he must have been a grown-up person and not a boy at all.

c. What does the speaker intend to say?
The speaker intends to say that courage is important and age and strength are not important.

**4 ."From the first of the next month, I'll sleep alone father."**

a. Who requested like this? Who does the word "I" refer to here?
Swami.

b. Did the father agree? Why?
No, he did not agree because he wanted his son to show courage by sleeping alone in the office
room.

c. Why did he request his father to allow him sleep alone from the first of next month?
He requested his father to allow him to sleep from the first of next month to escape from his father.

**5." You must do it now .It is disgraceful sleeping beside granny or mother like a baby."**

a. Who commanded like this?
Swami's father commanded Swami like this.

b. What does 'it' refer to here in the first sentence?
'It' refers to sleep alone in the office room.

c. What is shameful here? Why?
Sleeping beside his granny or mother like a baby was shameful. Because children should be taught
to live independently.

**6. "Why do you look at me while you say it? I hardly know anything about the boy"**

a. Who do the words 'me' and 'I' refer to here?
Swami's mother.

b. What did he say?
He did not like the way Swami was being brought up

c. What was the reply of Swami's father?
"No, no, I don't mean you."

**7." How could a boy fight a tiger?"**

a. Who is the speaker?
Swami

b. What does the speaker mean by this statement?
The speaker means that the boy could not fight a tiger and he must have been a grown-up and strong person.

c. What was the result of this comment?
Swami's father challenged him to show that he had courage by sleeping in the office room alone.

(Continued)

Prepared by : **Guru Hiremath** , English Language Teacher, S.G.S. High School Kadalabalu. H.B. Halli Tq


ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ


# ಮೆಕ್ಕೆಜೋಳಕ್ಕೆ ಸೈನಿಕ ಹುಳುಗಳ ಕಾಟ ಕೀಟಗಳ ನಿಯಂತ್ರಣಕ್ಕೆ ರೈತರಿಗೆ ಸಲಹೆ

■ ಹಂಪಿ ಟೈಮ್ಸ್ ಹೊಸಪೇಟೆ

ಮೆಕ್ಕಜೋಳ ಬೆಳೆಗೆ ಸೈನಿಕ ಹುಳುವಿನ ಬಾಧೆ ಕಾಣಿಸಿಕೊಳ್ಳತ್ತಿದ್ದು, ಈ ಹಿನ್ನೆಲೆಯಲ್ಲಿ ಬೆಳೆ ನಿರ್ವಹಣೆಗೆ ರೈತರಿಗೆ ಕೆಲವು ಸಲಹೆಗಳನ್ನು ನೀಡಲಾಗಿದೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ 18180 ಹೆ ಪ್ರದೇಶದಲ್ಲಿ, ಕೊಟ್ಟೂರು ತಾಲ್ಲೂಕಿನಲ್ಲಿ 23678 ಹೆ ಪ್ರದೇಶದಲ್ಲಿ, ಹೊಸಪೇಟೆ ತಾಲ್ಲೂಕಿನಲ್ಲಿ 4350 ಹೆ ಪ್ರದೇಶದಲ್ಲಿ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 19796 ಹೆ ಪ್ರದೇಶದಲ್ಲಿ ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ 69821 ಹೆ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯನ್ನು ಬೆಳೆಯಲಾಗುತ್ತಿದ್ದು, ಈ ಬೆಳೆಗೆ ಸೈನಿಕ ಕೀಟವು 80ಕ್ಕಿಂತಲೂ ಹೆಚ್ಚಿನ ಬೆಳೆಗಳಿಗೆ ಹಾನಿ ಉಂಟು ಮಾಡುವ ಸಾಮರ್ಥ್ಯ ಹೊಂದಿದೆ. ಮುಖ್ಯವಾಗಿ ಮೆಕ್ಕಜೋಳವನ್ನು ಅತಿಯಾಗಿ ಭಾದಿಸುತ್ತದೆ. ಈ ಸೈನಿಕ ಹುಳುವಿನ ವೈಜ್ಞಾನಿಕ ಹೆಸರು ಸ್ಪೊಡೋಪ್ಟೆರಾ ಫೃಗಿಪರ್ಡಾ ಎಂಬುದಾಗಿದೆ.

ಬೆಳೆ ಹಾನಿಯ ಲಕ್ಷಣಗಳು: ಹೆಣ್ಣು–ಪತಂಗವು ಎಲೆಗಳ ಮೇಲೆ ಕೆಳಗೆ ಅಥವಾ ಸುಳಿಯಲ್ಲಿ ಗುಂಪು ಗುಂಪಾಗಿ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯಿಂದ ಹೊರಬರುವ ಮೊದಲ ಹಂತದ ಮರಿಹುಳುಗಳು ಗುಂಪಾಗಿದ್ದು, ಎಲೆಯ ಹಸಿರು ಭಾಗವನ್ನು ಕೊರೆದು ತಿನ್ನುತ್ತವೆ. ನಂತರ ಬೆಳೆದ ಮರಿಗಳು ಪಕ್ಕದ ಗಿಡಗಳಿಗೆ ಹರಡಿ ಸುಳಿಯಲ್ಲಿ ಇದ್ದು ಎಲೆಗಳನ್ನು ತಿನ್ನುತ್ತವೆ. ಹಾನಿಗೊಳಗಾದ ಎಲೆಗಳಲ್ಲಿ ಸಾಲಾಗಿ ಉದ್ದನೆಯ ರಂಧ್ರಗಳು ಕಂಡು ಬರುತ್ತದೆ. ನಂತರ ಬೆಳೆದಂತಹ ಮರಿಹುಳುಗಳು ಎಲೆಗಳನ್ನು ತುದಿಯಿಂದ ಮಧ್ಯದ ಎಲೆ ಚಿಗುರು ತಿನ್ನುವುದರಿಂದ ಎಲೆಗಳು ಹರಿದಂತೆ ಗೋಚರವಾಗುತ್ತದೆ. ಕೀಟದ ಬಾಧೆಯು ತೀವ್ರವಾದಲ್ಲಿ ಸುಳಿಯನ್ನು ತಿಂದು ಅಧಿಕ ಪ್ರಮಾಣದಲ್ಲಿ ಹಿಕ್ಕೆಗಳನ್ನು ಹೊರ ಹಾಕುತ್ತದೆ. ಒಣಗಿದ ಈ ಹಿಕ್ಕೆಗಳು ತೌಡನ್ನು ಹೋಲುವುದರಿಂದ ಗಿಡದ ಮೇಲೆಲ್ಲಾ ತೌಡುಬಿದ್ದಿರುವಂತೆ ಕಾಣಿಸುತ್ತದೆ.

ನಿರ್ವಹಣಾ ಕ್ರಮಗಳು: ನಿರ್ದಿಷ್ಟ ಪ್ರದೇಶಕ್ಕೆ ಸೂಕ್ತವಾದ ದ್ವಿದಳ ಧಾನ್ಯಗಳೊಂದಿಗೆ ಅಂತರ ಬೆಳೆಯಾಗಿ ಮೆಕ್ಕೆಜೋಳ ಬೆಳೆಯಬಹುದು. ಮೆಕ್ಕೆಜೋಳದ ಜೊತೆಗೆ ತೊಗರಿ ಅಥವಾ ಉದ್ದು ಅಥವಾ ಹೆಸರು ಬೆಳೆಯಬಹುದು. >> 4

## ವಿಜ್ಞಾನ

# ಕಾಮನಬಿಲ್ಲು (ಮಳೆಬಿಲ್ಲು) ಏಕೆ ಮೂಡುತ್ತದೆ?

■ ಆರ್.ಬಿ.ಗುರುಬಸವರಾಜ

ವೀರೇಂದ್ರ ಮತ್ತು ಕೀರ್ತನ ಕಾಮನಬಿಲ್ಲನ್ನು ನೋಡಿ ಆನಂದಿಸುತ್ತಿದ್ದರು. ತಂದೆಗೆ ಪ್ರಶ್ನೆ ಮೇಲೆ ಪ್ರಶ್ನೆ ಕೇಳುತ್ತ ಕಾಮನಬಿಲ್ಲಿನ ಬಗ್ಗೆ ಮಾಹಿತಿ ತಿಳಿದುಕೊಂಡರು. ಈ ಬಾರಿ ಕೀರ್ತನ ಪ್ರಶ್ನೆ ಕೇಳಿದಳು. "ಪಪ್ಪಾ, ಕಾಮನಬಿಲ್ಲು ಏಕೆ ಮೂಡುತ್ತದೆ?" ಎಂದಳು ತಂದೆ ಅದೇ ಶಾಂತ ಚಿತ್ತದಿಂದ ಮಕ್ಕಳ ಪ್ರಶ್ನೆಗೆ ಉತ್ತರಿಸಿದರು.

ವಾತಾವರಣದಲ್ಲಿ ಸೂರ್ಯನ ಬೆಳಕು ಮತ್ತು ನೀರಿನ ಹನಿಗಳ ನಡುವಿನ ಪರಸ್ಪರ ಕ್ರಿಯೆಯ ಪರಿಣಾಮವಾಗಿ ಮಳೆಬಿಲ್ಲು ಉಂಟಾಗುತ್ತದೆ. ಸೂರ್ಯನ ಬೆಳಕು ವಿಭಿನ್ನ ಬಣ್ಣಗಳಿಂದ ಕೂಡಿದೆ. ಪ್ರತಿಯೊಂದೂ ಬಣ್ಣವು ವಿಭಿನ್ನ ತರಂಗಾಂತರವನ್ನು ಹೊಂದಿರುತ್ತದೆ. ಸೂರ್ಯನ ಬೆಳಕು ಮಳೆ ಹನಿಗೆ ಪ್ರವೇಶಿಸಿದಾಗ, ಅದು ಬಾಗುತ್ತದೆ. ಅಂದರೆ ವಕ್ರೀಭವನಗೊಳ್ಳುತ್ತದೆ. ಈ ಬಾಗುವಿಕೆಯು ವಿಭಿನ್ನ ಬಣ್ಣಗಳನ್ನು ಪ್ರತ್ಯೇಕಿಸಲು ಮತ್ತು ಹರಡಲು ಕಾರಣವಾಗುತ್ತದೆ. ಇದರಿಂದ



ಸೂರ್ಯನ ಬೆಳಕಿನ ಬಣ್ಣಗಳ ವರ್ಣಪಟಲ ಸೃಷ್ಟಿಯಾಗುತ್ತದೆ. ವರ್ಣಪಟಲಕ್ಕೆ ಕಾರಣವಾದ ಸೂರ್ಯನ ಬೆಳಕು ಹನಿಯಿಂದ ನಿರ್ಗಮಿಸುತ್ತದೆ. ನೀರಿನ ಹನಿಗಳಿಂದ ನಿರ್ಗಮಿಸಿದ ಬೆಳಕು ಪುನಹ ವಕ್ರೀಭವನಗೊಂಡು ಹರಡುತ್ತದೆ. ವರ್ಣಪಟಲದಲ್ಲಿ ಕೆಂಪು, ಕಿತ್ತಳೆ, ಹಳದಿ, ಹಸಿರು, ನೀಲಿ, ಇಂಡಿಗೊ ಮತ್ತು ನೇರಳೆ ಬಣ್ಣಗಳು ಗೋಚರಿಸುತ್ತವೆ.

ಮಳೆಬಿಲ್ಲಿನ ಆಕಾರವು ಅರ್ದ ವೃತ್ತಾಕಾರವಾಗಿದ್ದು, ವೀಕ್ಷಕನ ತಲೆಯು ವೃತ್ತದ ಕೇಂದ್ರವಾಗಿರುತ್ತದೆ. ಏಕೆಂದರೆ ಮಳೆಬಿಲ್ಲನ್ನು ರಚಿಸುವ ಹನಿಗಳು ವೀಕ್ಷಕನಿಗೆ ಹೋಲಿಸಿದರೆ ವಿಭಿನ್ನ ಕೋನಗಳಲ್ಲಿರುತ್ತವೆ ಮತ್ತು ವೀಕ್ಷಕನು ತನ್ನ ಕಣ್ಣುಗಳ ಕಡೆಗೆ ವಕ್ರೀಭವನಗೊಳ್ಳುವ ಬಣ್ಣಗಳನ್ನು ಮಾತ್ರ ನೋಡಬಹುದು. ಸೂರ್ಯನ ಬೆಳಕು ಸುಮಾರು 42 ಡಿಗ್ರಿ ಕೋನದಲ್ಲಿ ಮಳೆಹನಿಗಳ ಮೇಲೆ ಬಿದ್ದಾಗ ವಕ್ರೀಭವನಗೊಳ್ಳುತ್ತದೆ ಮತ್ತು ಮಳೆಬಿಲ್ಲನ್ನು ಸೃಷ್ಟಿಸುತ್ತದೆ. ಇದು ಒಂದು ನೈಸರ್ಗಿಕ ದೃಷ್ಟಿಭ್ರಮೆಯ ವಿದ್ಯಮಾನವಾಗಿದೆ.

ಮಳೆಬಿಲ್ಲುಗಳು ಪ್ರಕೃತಿಯಲ್ಲಿನ ಸುಂದರವಾದ ಮತ್ತು ಆಕರ್ಷಕವಾದ ನೈಸರ್ಗಿಕ ವಿದ್ಯಮಾನವಾಗಿದೆ. ಅವು ಶತಮಾನಗಳಿಂದ ವೈಜ್ಞಾನಿಕ ಅಧ್ಯಯನ ಮತ್ತು ಕಲಾತ್ಮಕ ಸ್ಫೂರ್ತಿಯ ವಿಷಯವಾಗಿದೆ. ಮಳೆಬಿಲ್ಲು ಬಣ್ಣಬಣ್ಣವಾಗಿ ಕಾಣುವುದರಿಂದ ಕಾಮನಬಿಲ್ಲು ಎಂಬ ಹೆಸರು ಬಂದಿದೆ. ಮಳೆ ಬೀಳುವ ಸಮಯದಲ್ಲಿ ಸೂರ್ಯನ ಬೆಳಕು ಬಿದ್ದಾಗ ಮಾತ್ರ ಮಳೆಬಿಲ್ಲು ಉಂಟಾಗುತ್ತದೆ ಮತ್ತು ವೀಕ್ಷಕರಿಗೆ ಸುಂದರ ನೋಟವನ್ನು ನೀಡುತ್ತದೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಈಗಲೂ ರಾಮಾಯಣದ ಕಾಲವನ್ನೇ ನೆನಪಿಸುವ ಹಂಪಿಯ ಮಧುವನ...

ಬೆಳಿಗ್ಗೆ ಎಂಟು ಗಂಟೆಗೆ ನನ್ನ ಗೆಳೆಯ ಫೋನ್ ಮೂಲಕ 'ನೋಡಪ್ಪ ಇಂದು ಹಂಪೆಯ ಮಧುವನಕ್ಕೆ ಹೋಗಿ ಬರೋಣ ವೇ ನೀನು ಯಾವುದೇ ನೆಪ ಹೇಳಿ, ತಪ್ಪಿಸಿಕೊಳ್ಳುವಂತಿಲ್ಲ ಸಿದ್ದನಾಗು ನಾವು ಬರುತ್ತಿದ್ದೇವೆ ಎಂದನು ' ನಾನು ಹೌದಾ ಎಂದು ಗೊನಗುತ್ತಲೆ ಸರಿ ಹೋಗೋಣ ಎಂದು ಒಪ್ಪಿಗೆ ನೀಡಿದೆ. ಈ ನಮ್ಮ ಗೆಳೆಯ ಮಧುವನದಲ್ಲಿ ಏನು ಕೆಲಸ, ಅಲ್ಲಿ ನೋಡುವಂತದ್ದು ಏನು ಇದೆ ಎಂದು ಅವರು ನೀಡಿದ ಸಮಯಕ್ಕೆ ಸಿದ್ಧನಾಗಿ ನಿಂತು ಬಿಟ್ಟೆ. ಆಗ ರಾಘು, ಮೋಹನ್ ಪ್ರಭು ಮತ್ತು ನಾನು ಹೋಸಪೇಟೆಯಿಂದ ಮಧುವನಕ್ಕೆ ಮೋಟಾರ್ ವಾಹನದಲ್ಲಿ ಹೊರಟೆವು. ಹೋಗುವ ದಾರಿ ಮಧ್ಯ ಕಮಲಾಪುರ ಕೆರೆಯ ಸೌಂದರ್ಯದ ಸೊಬಗು ಬೆಟ್ಟ, ಗುಡ್ಡ , ಹೊಲ, ಗದ್ದೆ, ಕಬ್ಬು ಹಾಗೂ ತೆಂಗು ಬಾಳೆ ಗಿಡಗಳು ಎಲ್ಲವೂ ನಮ್ಮ ಕಣ್ಮನ ತನಿಸಿದವು ಮುಂದೆ ಹೋದಾಗ ಮಾಲ್ಯಾವಂತ ತಿಮ್ಮಪ್ಪನ ಗುಡ್ಡದಲ್ಲಿ ತಿರುಪತಿ ದರ್ಶನ ಮಾಡಿ, ಮಧುವನಕ್ಕೆ ಬಂದೇವು. ಸ್ವರ್ಗವನ್ನೇ ದರಗಿಳಿಸಿದ ಈ ಸ್ಥಳದಲ್ಲಿ ಅರಳಿ ಮರದ ಕೆಳಗೆ ಕುಳಿತು ಸ್ವಲ್ಪ ವಿಶ್ರಾಂತಿ ಪಡೆದವು. ಆಗ ನನ್ನ ಗೆಳೆಯ ರಾಘು ರಾಮಾಯಣದ ಕೆಲವೂ ನೆನಪುಗಳನ್ನು ನಮಗೆ ಮನಸೂರೆಗೊಳ್ಳುವಂತೆ ಮಧುವನದಲ್ಲಿರುವ ವಾಲಿ ಸುಗ್ರೀವರ ಕತೆಯನ್ನು ನನ್ನ ಗೆಳೆಯ ಹೇಳಲು ಆರಂಭಿಸಿದ. ಮಧುವನವೂ ಎಲ್ಲ ಪ್ರಕಾರದ ಹಣ್ಣುಗಳನ್ನು ನೀಡುವ ಕಲ್ಪವೃಕ್ಷ ಕಾಮಧೇನು, ಇಲ್ಲಿ ಯಥೇಚ್ಛವಾಗಿ ಸಿಗುವ ಹಣ್ಣು ಹಂಪಲುಗಳನ್ನು, ಸಿಹಿ ಜೇನನ್ನು ಸವಿಯುತ್ತಾ ಕಾಡಿನಲ್ಲಿ ದೇವಾನುದೇವತೆಗಳು ವಾಸವಾಗಿರುವ ಸ್ಥಳವಂತೆ ಇದನ್ನು ಇಂದ್ರದೇವನು ನೋಡಿಕೊಳ್ಳುತ್ತಿದ್ದನಂತೆ.



ಒಂದು ದಿವಸ ತಮಗೆ ಹಸಿವು ಆದಾಗಲೆಲ್ಲ ಹಸಿವು ತನಿಸುವ ಅಮೃತ ಸ್ಥಳ ಈ ಮದುವನವನ್ನು ದೇವೇಂದ್ರನು ವಾಲಿ ಶುಕ್ರನಿಗೆ ದೇನಿಗೆಯಾಗಿ ನೀಡಿದನಂತೆ, ಕಾಲ ನಂತರ ಸುಗ್ರೀವನು ಸೋದರ ಅಳಿಯನಾದ ದದಿಮುಕನಿಗೆ ಈ ಅರಣ್ಯದ ಪಾಲನೆ ಮಾಡಲು ಅಂದರೆ ರಕ್ಷಿಸುವ ಜವಾಬ್ದಾರಿ ತೆಗೆದುಕೊಂಡನಂತೆ ಆದರೆ ಒಂದು ದಿವಸ ರಾವಣನು ಸೀತೆಯನ್ನು ಲಂಕಾ ಪಟ್ಟಣಕ್ಕೆ ಕರೆದೊಯ್ದಿದಾಗ ಆ ಸೀತಾಮಾತೆಯನ್ನು ಕರೆದುಕೊಂಡು ಬರಲು ಹನುಮಂತನು ಲಂಕೆಗೆ ಹೋದನಂತೆ. ರಾವಣನ ಮಾತಿನಂತೆ ಹನುಮಂತನು ಸೀತೆಯನ್ನು ಪತ್ತೆ ಮಾಡಿ ಆ ಸೀತೆಯನ್ನು ಈ ಭರತ ಖಂಡಕ್ಕೆ ಕರೆದುಕೊಂಡು ಬಂದಾಗ, ಈ ಸಂತಸಕ್ಕಾಗಿ ಕಪಿ ಸೇನೆಯು ಮಧುವನಕ್ಕೆ ಹೋಗಿ ಮಧುರಸವನ್ನು ಹೀರಲು ಜಾಂಬುವಂತ, ನೀಲಾ ಮುಂತಾದ ವಾನರಸೇನೆಗೆ ಅಂಗದ ಮಹಾರಾಜ ಅಪ್ಪನೆ ನೀಡಿದನಂತೆ ಹೋಗಿ ಮಧುರಸವನ್ನ ಸವಿದಿ ಬನ್ನಿ ಎಂದು ಅಂಗದ ರಾಜನು ಅಮೃತ ಪರ್ವತದ ಕಡೆ ಕಳಿಸಿದ ಆ ನೆನಪು ಆ ಪರ್ವತವೇ ಮಧುವನ ಎಂದು ನಮ್ಮ ಗೆಳೆಯ ಸುಂದರಕಾಂಡದ ತುಣುಕು ಹೇಳುತ್ತಾ ಬೇರೆ ಬೇರೆ ಕಥೆಗಳನ್ನು ನೆನಪಿಸಿದನು. ರಾವಣ ಕೇಳಿದನಂತೆ ಹೇ ಹನುಮಂತ ನಿನಗಿಂತಲೂ ಇನ್ನು ಸಾಹಸವಂತರು ನಿಮ್ಮ ರಾಮನ ಸೇನೆಯಲ್ಲಿ ಇದ್ದಾರೆಯೆ ಎಂದಾಗ, ಹನುಮಂತನು ಹ್ಮ್ ಇದ್ದಾರೆ ನನಗಿಂತಲೂ ನೀಲ ಎನ್ನುವ ಮಹಾಪರಾಕ್ರಮಿಗಳು ಎಷ್ಟೋ ಜನ ಇದ್ದಾರೆ. ನಾನು ಒಬ್ಬನೇ ಮಾತ್ರ ಲಂಕಾ ಪಟ್ಟಣಕ್ಕೆ ಬಂದಿದ್ದೇನೆ ಅಷ್ಟೇ ಅವರೆಲ್ಲರು ಇಲ್ಲಿಗೆ ಬಂದರೆ ನಿಮ್ಮ ಗತಿ ಏನು ಎಂದು ಚಿಂತಿಸುತ್ತಿದ್ದೇನೆ ಅಷ್ಟೇ ಎಂದು ಉತ್ತರಿಸಿದನಂತೆ. ಹನುಮಂತ ಹಾಗೂ ಸೀತಾ ಮಾತೆ ಭೇಟಿಯಾಯಿತು ಮಾತು ಕತೆಯು ನಡೆಯಿತು ಅಮ್ಮ ಸೀತಾಮಾತೆ ರಾಮದೇವರು ನಿನ್ನನ್ನು ಕರೆದುಕೊಂಡು ಬರುವಂತೆ ಹೇಳಿದ್ದಾರೆ. ಈ ಲಂಕಾ ಪಟ್ಟಣವನ್ನು ಸುಟ್ಟು ಆದರೂ ನಿಮ್ಮನ್ನು ಕರೆದೊಯ್ಯುವೆ. ತಾಯಿ ನೀವು ಬರಲು ಸಿದ್ಧರಾಗಿ ಎಂದರಂತೆ, ಆಗ ಸೀತಾಮಾತೆ ಅಯ್ಯಾ ರಾಮ ಭಕ್ತ, ರಾಮ ಪೂಜಿತನೇ ಹನುಮಾ, ನನ್ನನ್ನು ರಾಮನೆ ಬಂದು ಕರೆದುಕೊಂಡು ಹೋಗಲಿ.



ಜಿ.ಯರಿಸ್ವಾಮಿ ಸಂಕ್ಲಾಪುರ
ಹೊಸಪೇಟೆ

Hampi Times E-paper
SCAN AND READ

ನೀನು ರಾಮದೂತ ನಾದರೂ, ಆದ್ಯ ಭಕ್ತನಾದರು, ರಾಮ ಸೀತೆಯನ್ನು ಹೃದಯ ಕವಟದಲ್ಲಿಟ್ಟು ಆರಾಧಿಸಿ ಪೂಜಿಸಿದರು, ನಾನು ನಿನ್ನ ಹಿಂದೆ ಬರಲು ಆಗುವುದಿಲ್ಲ. ನೀನು ನನ್ನ ಬಹಳ ಸುರಕ್ಷಿತವಾಗಿ ಕರೆದೊಯ್ಯುವ ನಂಬಿಕೆ ವಿಶ್ವಾಸವು ಕೂಡ ಇದೆ ಯೋಚಿಸು ಈ ಲೋಕದ ಜನ ನಿನ್ನಿಂದ ನಾನು ಬಂದರೆ ಮುಂದೊಂದು ದಿನ ರಾಮನ ಇರುವಾಗ ಹಾಗೆ ಬರಲು ಆಗುತ್ತದೆಯೇ ನಾನು ಏನಿದ್ದರೂ ಎಷ್ಟಿದ್ದರೂ ಆ ರಾಮ ದೇವರ ಹಿಂದೆ ಬರುವೆ, ಈಗಲೇ ಈ ರಾಮನಿಗೆ ಸಂದೇಶವನ್ನು ತಿಳಿಸು ಹೋಗು, ಹೋಗಿ ಬಾ ನಿನ್ನ ಪ್ರಯಾಣ ಸುಖಕರವಾಗಲಿ ಎಂದಾಗ, ಅಮ್ಮ ಎಂದು ವಿನಯ ಪೂರಕವಾಗಿ ವಿನಯ ಲಂಕಾ ಪಟ್ಟಣದಿಂದ ಸೀತೆಯನ್ನು ಕರೆತಂದಿದ್ದು ರಾಮನೇ ಎಂದು ಜಗತ್ತಿಗೆ ಗೊತ್ತಾಗಬೇಕು ಆಗ ರಾಮನ ಕೀರ್ತಿ ಸರ್ವಕಾಲಕ್ಕೂ ಹೆಚ್ಚುತ್ತದೆ ರಾಮನ ಘನತೆಯನ್ನು ಎತ್ತಿ ಹಿಡಿದಂತಾಗುತ್ತದೆ, ಸೀತೆಯ ಪತಿ ಬಗ್ಗೆ ಇರುವ ಪತಿಭಕ್ತಿಯನ್ನು ಇನ್ನೆಷ್ಟು ಮೆಚ್ಚುವಂತಾಯಿತು, ನನಗೆ ಕೇಳಿ ಸಂತೋಷವಾಯಿತು ಹೀಗೆ ಅನೇಕ ರಾಮಾಯಣದ ಘಟನೆಗಳನ್ನು ತಿಳಿದು ಇಂತಹ ಪುಣ್ಯಸ್ಥಳವಾದ ಹಂಪೆಯೇ ಮದುವನದ ಮಹಿಮೆಗೆ ನನ್ನ ಕಿವಿಗಳೇ ಪಾವನವಾದವು. ಮನಸ್ಸು ರೋಮಾಂಚನಗೊಂಡು ಪುನಃ ಚೇತನಗೊಂಡೆನು ಆಗ ಸೀತಾ, ರಾಮ, ಲಕ್ಷ್ಮಣ, ಹನುಮಂತನ ದರ್ಶನ ಮಾಡುವಾಗ ನನಗೆ ಎಲ್ಲಿಲ್ಲದ ಭಕ್ತಿ ಉಕ್ಕಿಬಂದಿತು ಜೊತೆಗೆ ಹನುಮಂತನ ಬಗ್ಗೆ ಹೆಮ್ಮೆ ಮೂಡಿ ಆತ್ಮವಿಶ್ವಾಸ ಮೈದುಂಬಿ ಕೊಂಡಿತು. ಈ ಸ್ವರ್ಗ ತಾನ ನೋಡಲು ಮನವು ಹಿಗ್ಗಿ ಕಣ್ಣು ತುಂಬಿಕೊಂಡಿತು. ಗಂಟೆ ಒಂದು ಆಗುತ್ತಲೇ ಬಂದಿತು. ಅಲ್ಲಿಯ ಬೆಟ್ಟ ಗುಡ್ಡ ಹಸುರಿನಲ್ಲಿ ಕಣ್ಣು ಕುಕ್ಕಿ ಎದೆಯ ಹಕ್ಕಿ ಹೆಕ್ಕಿ ಮೇಲೇರಿ ಇಡೀ ಮದುವನದ ಗತಘಾತವ ಸಾರುವ ಇತಿಹಾಸದ ಕಥೆಯೊಳಗೆ ನಾನು ನನ್ನ ಮನವು ಮುಳಗಿ ಮೈ ಪುನೀತವಾಗಿತ್ತು. ಆ ಸೌಂದರ್ಯದ ಸೊಬಗನ್ನು ನನ್ನ ಮನಕ್ಕೆ ಹೊಕ್ಕಿತು. ಈ ನೆಲದಲ್ಲಿ ಹುಟ್ಟಿದ್ದು ನನ್ನ ಪೂರ್ವಜನ್ಮದ ಫಲವೇ ಇರಬೇಕೆಂದು, ವಿನಯದಿಂದ ಈ ನೆಲ, ಜಲ ಅರಣ್ಯಕ್ಕೆ, ಕೈ ಮುಗಿಯುವಾಗ ಆಗಲೇ ಹೊಟ್ಟೆ ತಾಳಾಗುತ್ತಿತ್ತು.

ಅಲ್ಲೇ ವಯಸ್ಸಾದ ಮೂವರು ಅಲ್ಲಿಯ ಆಡಳಿತ ನಿರ್ವನಿಗೆ ಒಬ್ಬರು ಪೂಜೆಗೆ ಪ್ರಸಾದಕ್ಕೆ ಎಂದು ಇಬ್ಬರನ್ನು ನೋಡಿದೆ, ಅವರಲ್ಲಿ ಒಬ್ಬ ಪೂಜೆ ನೈವೇದ್ಯ ದೇವರಿಗೆ ಅರ್ಪಿಸಿ, ರಾಮ್ ರಾಮ್ ಅಂದರು, ನನಗೆ ಅರ್ಥವಾಗಲಿಲ್ಲ ನನ್ನ ಗೆಳೆಯರು ಹೋ ಹೋ ರಾಮ ರಾಮ ಬನ್ನಿ ಎಂದರು, ಮೇಲೆ ಎದ್ದೆವು ಎಲ್ಲಿಗೆ ಎಂದು ಕೇಳಿದ್ದಕ್ಕೆ, ಮಹಾಪ್ರಸಾದಕ್ಕೆ ಸ್ವಲ್ಪ ಮುಂದಕ್ಕೆ ಹೋದಾಗ ಅನ್ನ ಸಂತರ್ಪಣೆ ಗೃಹ ಎಂದು ಬರೆದ ಊಟದ ಹಾಲಿಗೆ ಹೋದೆವು. ಆಗ ಸುಮಾರು 70 75 ವರ್ಷದ ವಯಸ್ಸಿನ ವೃದ್ಧರು ಊಟದ ತಟ್ಟೆ ತಂದು ನಮ್ಮ ಮುಂದೆ ಇಟ್ಟು, ಬಿಸಿ, ಬಿಸಿ ಪಾಯಸ ಅನ್ನ ಸಾರು, ಆಲೂಗಡ್ಡೆ ಪಲ್ಯ ತಂದು ಬಡಿಸಿದರು. ಅವರು ನೀಡಿದಂತಲ್ಲ ಉಂಡು ಸಂತೃಪ್ತರಾದೆವು, ನಂತರ ಮತ್ತೆ ಬಂದು ಹರಳಿ ಮರಳದ ಕೆಳಗೆ ಕುಳಿತು ವಿಶ್ರಾಂತಿ ತೆಗೆದುಕೊಂಡು ಮತ್ತೆ ಯೋಚಿಸತೊಡಗಿದೆ.

ಈ ವೃದ್ಧರು ಈ ವಯಸ್ಸಿನಲ್ಲೂ ತಮ್ಮ ಹೆಂಡತಿ, ಮಕ್ಕಳು ಮೊಮ್ಮಕ್ಕಳು ಜೊತೆ ಜೀವನ ನಡೆಸುವುದನ್ನು ಬಿಟ್ಟು ಇಲ್ಲಿಗೇಕೆ ಬಂದು ಇಂತಹ ಘನ ಸೇವೆ ಕಾರ್ಯದಲ್ಲಿ ತೊಡಗಿದ್ದಾರೆ ಅಂದುಕೊಂಡೆ. ನಾನು ಶಿಕ್ಷಕನಾಗಿದ್ದರಿಂದ ಒಂಬತ್ತನೇ ತರಗತಿಯಲ್ಲಿ ಬಿಜಿಯಲ್ ಸ್ವಾಮಿ ಅವರು ಬರೆದ ಹಸಿರು ಹೊನ್ನು ಪುಸ್ತಕದ ಅರಳಿಕಟ್ಟೆ ಪಾಠದಲ್ಲಿ ಬರುವ ಶೇಷಪ್ಪನವರ ಯಶೋಗಾಥೆಯನ್ನು ಅರಳಿಮರದ ಮಹತ್ವ, ಸಾಮಾಜಿಕ ಮೌಲ್ಯ, ಜನರ ಬಗ್ಗೆ ಇದ್ದ ಕಾಳಜಿ, ಇವುಗಳೆಲ್ಲವನ್ನು ಮಕ್ಕಳಿಗೆ ಮಧುವನದಲ್ಲಿ ಈ ಮೂರು ವ್ಯಕ್ತಿಗಳು ಸೇವ ಮನೋಭಾವವನ್ನು ಮೇಳೈಸಿ ಹಾಗೂ ಶೇಷಪ್ಪ ಹಾಗೂ ಈ ಮೂರು ವೃದ್ಧರ ಜೀವನ ಶೈಲಿ ಒಂದಾಗಿದೆ ಎಂದು ಮಕ್ಕಳಿಗೆ ವಿಸ್ತಾರವಾಗಿ ತಿಳಿಸಿದೆ. ಇಲ್ಲಿ ಕೂಡ ಈ ಮೂವರು ದಿನಾಲು ಆಹಾರ, ಪಳಾರ, ಉಪಹಾರವನ್ನು ಸಿದ್ಧಪಡಿಸಿ ಅಲ್ಲಿ ಬಂದ ಜನಕ್ಕೆ ಉಣಬಡಿಸಿ ಅವರು ಸಂತೃಪ್ತವಾದ ನಂತರವೇ ತಾವು ಊಟ ಮಾಡುವ ಸಂಸ್ಕೃತಿ ನಡೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಅದನ್ನು ಮನಗಂಡ ನಾನು ಆಶ್ಚರ್ಯ ಚಕಿತನಾದನು ವೃದ್ಧರ ಮನಸ್ಸಿನಲ್ಲಿರುವ ಹುಮ್ಮಸ್ಸು ಕಂಡು ನಮಗೆ ಸ್ವಲ್ಪ ಮುಜುಗರವೇ ಆದರು ಸಂತೋಷವಾಯಿತು. ಇಂತಹ ಆಧುನಿಕ ಕಾಲದಲ್ಲಿ ಅದು ಈಗಲೂ ರಾಮಾಯಣದ ಕಾಲವನ್ನೇ ನೆನಪಿಸುವ ಮಧುವನದ ಸೇವಾ ಕ್ಷೇತ್ರ ಮುಂದುವರೆಸಿರುವದನ್ನು ನೋಡಿ, ಜೀವನದ ಸಾರ್ಥಕತೆ ಕಂಡುಕೊಳ್ಳುವ ಇವರ ಸೇವ ಮನೋವೃತ್ತಿಯನ್ನು ನಿಜವಾಗಲೂ ಇಂತವರ ಕಾಲಿಗೆ ಶಿರಷ್ಟಾಂಗ ನಮಸ್ಕಾರ ಮಾಡಿ. ಈ ಕಾಲದಲ್ಲೂ ಆ ಕಾಲದ ಋಷಿಮುನಿಗಳನ್ನು ನೋಡಿದೆ ನನಗೆ ಜೀವನವೇ ಕನ್ನಡಿಯಾದಂತಾಯಿತು ಇಂದು ಆಧುನಿಕ ಭರಾಟೆಯ ನಾಗಲೋಟದಲ್ಲಿ ಆಸೆಯ ಹುಚ್ಚು ಕುದುರೆ ಹತ್ತಿ, ಹಣ ಅಧಿಕಾರ, ಪ್ರತೀಷ್ಟೇ, ಹಿಂದೆ ಬಿದ್ದು ಮಾನವೀಯತೆ ಮರೆತು. ತಾವು ಮೌಲ್ಯಯುತವಾಗಿ ಬದುಕುವುದನ್ನು ನೋಡಿದರೆ ಎಲ್ಲರಿಗೂ ಸೂಜಿಗವಾಗುತ್ತದೆ, ಆದರೆ ಇಂದು ಕ್ರೀಡೆ, ಸಿನಿಮಾ ರಾಜಕೀಯ, ಕ್ಷೇತ್ರದೊಳಗೆ ಲೋಭವೆಸಗುವ ಮಂದಿಯಲ್ಲಿ ಒಂದು ದೃಢಸಂಕಲ್ಪದೊಂದಿಗೆ ಸಂತ, ಶರಣ, ಋಷಿ ಮುನಿಗಳಂತೆ ಬಂದು, ಕಾಯಕದಲ್ಲಿ ಸ್ವಲ್ಪ ಹಣವನ್ನು ದಾನ ಮಾಡದ ಜನರನ್ನು ನೋಡುತ್ತೇವೆ ಆದರೆ ಈಗ ಈ ಮೂರು ಮಹಾವ್ಯಕ್ತಿಗಳು ತಾವು ಹಂಚಿ ಉಣ್ಣುವ ದೇವಮಾನವರನ್ನು ಕಾಪಾಡಲು, ಇಲ್ಲಿ ಶ್ರೀರಾಮನೇ ಇದ್ದಾನೆ, ಈಗಲೂ ಇಂದು ಮುಂದು ಕೂಡಾ ಈ ವೃಕ್ಷ ಕಾಶಿಯಲ್ಲಿ ರಾಮನ ಅಕ್ಷಿಯೇ ಇದ್ದು. ಮಹಾ ಸೌಭಾಗ್ಯದಿಂದ ಬಾಳುವದು ಅನುಭವದಲ್ಲಿ ಸ್ಪಷ್ಟವಾಗಬೇಕಾದರೆ, ನಾವು ಇಲ್ಲಿಗೆ ಬಂದು ಈ ಸಂಪ್ರದಾಯ ಗಾಳಿಯನ್ನು ತಾಗಿಸಿಕೊಂಡು ರಾಮಾಯಣದ ನೆನಪಲ್ಲಿ ಸೋಂಕಿಸಿ ಅನುಭವಿಸಿದ ಆ ಸ್ವರ್ಗ ಸುಖ ಹೃದಯಸ್ಪರ್ಶಿ ಉಂಟು ಮಾಡಿತು. ಈ ನೋಟವು ನನ್ನ ಅನುಭವಕ್ಕೆ ಕಲ್ಪನೆಯು ಮೇಲೆ ನಿಂತಾಗ ನನ್ನ ಅನುಭವದ ನೆನಪುಗಳು, ಯೋಚನೆಗಳು, ಅನಿಸಿಕೆಗಳು ಈ ಸಮಾಜಕ್ಕೇ ಹಂಚಿಕೊಳ್ಳಲೇಬೇಕು ಏಕೆಂದರೆ ಇಂತಹ ಪವಿತ್ರ ಕ್ಷೇತ್ರಕ್ಕೆ ಬರಲು ರಾಮನ ಸಂಕಲ್ಪವೇ ಇರಬೇಕು. ಅದು ನನ್ನ ಸಂಕಲ್ಪಕ್ಕೆ ಸರಿಯಾಗಿರಬೇಕು ಅದಕ್ಕೆ ನಾನು ಅದೃಷ್ಟವಂತನೇ ಸರಿ ಎಂದುಕೊಂಡೆ.

## ಅನಿರೀಕ್ಷಿತ

ಕೆಲವೊಂದು ಅನಿರೀಕ್ಷಿತವಾಗಿ ನಡೆದ ಘಟನೆಗಳು ಮನುಷ್ಯನ ಬದುಕಿನ ದಿಕ್ಕನ್ನೇ ಬದಲಿಸುತ್ತದೆ. ಇದರಿಂದಾಗಿ ಒಳಿತು ಆಗಬಹುದು ಹಾಗೆಯೇ ಕೆಡಕು ಕೂಡ ಆಗಬಹುದು. ವ್ಯವಹಾರದಲ್ಲಿ ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚಾಗಿ ಲಾಭವಾದರೆ ಯಾವುದಾದರೂ ಸ್ಪರ್ಧೆಯಲ್ಲಿ ಪಾಲ್ಗೊಂಡು ನಾವು ಊಹಿಸದ ರೀತಿಯಲ್ಲಿ ನಮಗೆ ಬಹುಮಾನ ಬಂದರೆ, ಅನಿರೀಕ್ಷಿತವಾಗಿ ದೊಡ್ಡ ಕಂಪನಿಯಿಂದ ಆಫರ್ ಲೆಟರ್ ಬಂದಾಗ, ಪ್ರತಿಷ್ಠಿತ ಕಾಲೇಜಿನಲ್ಲಿ ಓದಲು ಅವಕಾಶ ಇಲ್ಲ ಎಂದು ಖಾತ್ರಿ ಆದ ಮೇಲೂ ಕೆಲವೊಂದು ಬಾರಿ ಅವಕಾಶ ಸಿಕ್ಕಾಗ ಆಗುವ ಸಂತೋಷಕ್ಕೆ ಪಾರವೇ ಇರುವುದಿಲ್ಲ.

ಮುನ್ಸೂಚನೆ ಇಲ್ಲದೆ ಅನಿರೀಕ್ಷಿತವಾಗಿ ಬರುವ ಕೆಲವು ಸುದ್ದಿಗಳು ಸಂತೋಷಕ್ಕೆ ಕಾರಣವಾದರೆ ಇನ್ನು ಕೆಲವು ಸುದ್ದಿಗಳು ದುಃಖಕ್ಕೆ ಕಾರಣವಾಗುತ್ತದೆ. ಅನಿರೀಕ್ಷಿತ ಘಟನೆಗಳಿಂದಾಗಿ ಬಡವ ಶ್ರೀಮಂತನಾಗಬಹುದು ಹಾಗೆಯೇ ಶ್ರೀಮಂತನು ಬಡವನಾಗಬಹುದು.

ಅಪಘಾತ, ಬೆಂಕಿಯ ಅವಘಡ, ಜಲಪ್ರಳಯ ಕ್ಷಾಮ, ಮಾರಣಾಂತಿಕ ಕಾಯಿಲೆಗಳು ಅನಿರೀಕ್ಷಿತವಾಗಿ ಆಕ್ರಮಿಸಿ ಜನರ ಜೀವನವನ್ನು ಅಸ್ತವ್ಯಸ್ತ ಮಾಡುತ್ತದೆ. ಕರೋನ ಎಂಬ ಮಹಾ ಮಾರಿಯೂ ಅನಿರೀಕ್ಷಿತವಾಗಿ ಲಗ್ಗೆ ಇಟ್ಟು ಜಗತ್ತಿನ ಆರ್ಥಿಕ ಸಾಮಾಜಿಕ ರಾಜಕೀಯ ವ್ಯವಸ್ಥೆಯನ್ನೇ ಅಲ್ಲೋಲಕಲ್ಲೋಲ ಮಾಡಿತು. ಎಷ್ಟೋ ಜನರು ಈ ಮಹಾಮಾರಿಗೆ ಬಲಿಯಾಗಿದ್ದಾರೆ ಅವರನ್ನು ನಂಬಿಕೊಂಡಿದ್ದ ಕುಟುಂಬಸ್ಥರು ಅನಾಥರಾಗಿದ್ದಾರೆ. ಇದು ಚಿಕ್ಕ ಮಕ್ಕಳು ಮಧ್ಯ ವಯಸ್ಸನ್ನು ಬಲಿ ತೆಗೆದುಕೊಂಡಿದೆ. ಜನರು ನೆಮ್ಮದಿ ಹಾಗೂ



ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಸಮಾಜದ ಸ್ವಾಸ್ಥ್ಯವನ್ನೇ ಹಾಳು ಮಾಡಿದೆ.

ಅನಿರೀಕ್ಷಿತ ಘಟನೆಗಳು ಎದುರಾದ ಸಮಯದಲ್ಲಿ ನಾವು ವಿವೇಕದಿಂದ ಆ ಸಂದರ್ಭವನ್ನು ನಿಭಾಯಿಸಬೇಕು. ಅನಿರೀಕ್ಷಿತವಾದ ಸನ್ನಿವೇಶಗಳನ್ನು ನಾವು ಹೇಗೆ ನಿರ್ವಹಿಸುತ್ತೇವೆ ಎನ್ನುವುದು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಅನಿರೀಕ್ಷಿತತೆ ನಮ್ಮ ಜೀವನದ ಭಾಗವಾಗಿದೆ.

ರಾಜನಾಗಿ ಅರಮನೆಯಲ್ಲಿ ರಾಜ್ಯಭಾರ ಮಾಡಬೇಕಾಗಿದ್ದ ಪ್ರಭು ಶ್ರೀರಾಮಚಂದ್ರನು ವನವಾಸವನ್ನು ಹಾಗೂ ಪಾಂಡವರು ಅಜ್ಞಾತವಾಸವನ್ನು ಅನುಭವಿಸಬೇಕಾದ ಪರಿಸ್ಥಿತಿ ಎದುರಾಗಿರುವುದು ಅನಿರೀಕ್ಷಿತವಾಗಿ ನಡೆದ ಘಟನೆಗಳಿಂದಲೇ ಅಲ್ಲವೇ?

**– ಚೇತನ ಭಾರ್ಗವ, ಬೆಂಗಳೂರು**

## ಹಿರಿಯ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾಲೋಚನೆ



**ಹಂಪಿ ಟೈಮ್ಸ್ ಬೆಂಗಳೂರು**


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಬೆಂಗಳೂರು ನಗರ ಅಭಿವೃದ್ಧಿ ಕುರಿತು ನಗರದ ಸಚಿವರು ಹಾಗೂ ಶಾಸಕರ ಜೊತೆ ಹಾಗೂ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಈ ಸಭೆಯಲ್ಲಿ ಪೆರಿಫೆರಲ್ ರಿಂಗ್ ರಸ್ತೆ, sky deck ನಿರ್ಮಾಣ, ಘನ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿ, ಬೆಂಗಳೂರು ನಗರದ ಸಂಚಾರದಟ್ಟಣೆ ನಿವಾರಣೆಗಾಗಿ ಟನೆಲ್ ರಸ್ತೆ ನಿರ್ಮಾಣ ಹಾಗೂ ಹೈ ಡೆನ್ಸಿಟಿ ಕಾರಿಡಾರ್ ಅಭಿವೃದ್ಧಿ ಮೊದಲಾದ ವಿಷಯಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ನಾಲ್ಕೈದು ಬಾರಿ ಟೆಂಡರ್ ಕರೆದರು ವಿಫಲವಾಗಿರುವುದರಿಂದ ಪರಿಸರಲ್ ರಿಂಗ್ ರಸ್ತೆ ಅಭಿವೃದ್ಧಿಗೆ ವಿವಿಧ ಸಾಧ್ಯತೆಗಳು ಹಾಗೂ ಸಂಪನ್ಮೂಲ ಕ್ರೋಡೀಕರಣದ ಅವಕಾಶಗಳನ್ನು ಪರಿಶೀಲಿಸಿ ವಿವರವಾದ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸುವಂತೆ ಸೂಚಿಸಿದರು. ಇದಲ್ಲದೆ ನಗರದಲ್ಲಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಹಾಗೂ ಆಯವ್ಯಯದಲ್ಲಿ ಘೋಷಿಸಿದಂತೆ ಸಂಚಾರ ದಟ್ಟಣೆ ನಿವಾರಣೆಗೆ ಟನೆಲ್ ರಸ್ತೆಗಳ ನಿರ್ಮಾಣ ಅಭಿವೃದ್ಧಿ ಹಾಗೂ ರಾಜಕಾಲುವೆಗಳ ಬಫರ್ ಜೋನ್ ನಲ್ಲಿ ರಸ್ತೆಗಳ ನಿರ್ಮಾಣ ಮೊದಲಾದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬೆಂಗಳೂರು ನಗರದ ಸಚಿವರಾದ ರಾಮಲಿಂಗಾ ರೆಡ್ಡಿ, ಕೆ ಜೆ ಚಾರ್ಜ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್ ದಿನೇಶ್ ಗುಂಡೂರಾವ್ ಮೊದಲಾದವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯೆಲ್, ಮುಖ್ಯಮಂತ್ರಿ ಅವರ ಅಪರ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್ ಮತ್ತು ಇತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

## ಕವಿ ಮನಸು

### ಬ್ರಹ್ಮ ಗಂಟು



ಎಷ್ಟು ಚಂದ ಹಾರುತಾವ ಗಾಳಿಪಟ
ನೋಡಲು ಉತ್ಸಾಹ ಮನಕೆ ಚೆಲ್ಲಾಟ
ಇಬ್ಬರೂ ಗಾಳಿಪಟ ಹಿಡಿದರೆ ಚಂದ
ಗಾಳಿಯಲಿ ಗಾಳಿಪಟ ಆಡಿದರೆ ಚಂದ।

ಸಂಸಾರ ಸಾಗರ ನೋಡಲು ಚೆಂದ ಗೆಳತಿ
ಅದರ ಅಗಲ ಆಳ ಅಳೆಯಬಾರದು ಗೆಳತಿ
ಬಂದಂತೆ ದಾರಿ ಸವೆಸಿದರೆ ಚಂದ ಗೆಳತಿ
ನೆಮ್ಮದಿ ಸಂತಸ ಮನದಲಿ ಇರಲಿ ಗೆಳತಿ।

ನೀನೊಂದು ಭಾವ ನಾನೊಂದು ಭಾವ
ಎರಡು ಒಂದಾದರೆ ಇನ್ನೆನು ಜೀವಕ್ಕೆ
ಜೀವ
ಅರಿತು ಬೆರೆತು ಬಾಳ ನೌಕೆ ಸಾಗಿದರೆ
ಸಂಸಾರ
ಅರಿಯದೆ ಹೋದರೆ ತೆರೆಗಳಿಗೆ ಸಿಕ್ಕು
ಸಸಾರ।

ಗಾಳಿ ಬಿಟ್ಟಾಗ ಮಾತ್ರ ಗಾಳಿ ಪಟಕ್ಕೆ ಜೀವ
ಗಾಳಿ ಬೀಸದೆ ಇರುವಾಗ ಗಾಳಿ ಪಟ
ನಿರ್ಜೀವ
ಈ ಸಂಸಾರದಲ್ಲಿ ಗಾಳಿ ಬಿರುಗಾಳಿ
ಉಂಟು
ಅಂಜದೆ ಅಳುಕದೆ ಸಾಗೋಣ ಇದು
ಬ್ರಹ್ಮಗಂಟು।

– **ಚಂದ್ರಶೇಖರಯ್ಯ ರೋಣದಮಠ.**
**ಹೊಸಪೇಟೆ**

## ಆರೋಗ್ಯವೇ ಭಾಗ್ಯ

ಆರೋಗ್ಯವಂತ ಆಗೋ ತಮ್ಮ
ಅದಕ್ಕಿಂತ ಸಿರಿಯು ಇಲ್ಲ.
ದೃಷ್ಟ ರ ಸಂಘ ಮಾಡಲು ಬೇಡ
ಕೆಟ್ಟ ಚಟವನು ಕಲಿಯಲು ಬೇಡ...

ದೊಡ್ಡ ಮನೆಯನ್ನು ಕಟ್ಟಿದರೇನು
ಬಡ್ಡಿಯ ಸಾಲವನ್ನು ಕೊಟ್ಟರೆ .ಏನು.
ರೋಗದಿ ಬೋಳಲುತ ಇರುವಾಗ
ನಿನ್ನನು ಕೇಳುವರು ಯಾರು ಇಲ್ಲ...

ಪ್ರೀತಿಯ ಮಡದಿಯು ಇದ್ದರೆನು
ಮನೆಯಲ್ಲಿ ಸಿರಿಯು ತುಂಬಿದರೇನು.
ಸಕ್ಕರೆ ಕಾಯಿಲೆ ಬಂದಿರಲು
ತಿನ್ನಲು ಸೌಖ್ಯ ದೊರೆಯುವುದೇ...

ಎಷ್ಟು ದಿನಗಳು ಬದುಕಿದ ರೇನು
ಕಷ್ಟವು ನಿನ್ನನು ಬಿಡುವುದೇ.
ಹಗಲು ಇರಲು ಚಿಂತೆಯ ಮಾಡಿ
ಕೊರಗಿ ಸೊರಗಿ ಹೋಗುವೆ ಏಕೆ...

ಒಳ್ಳೆಯ ದಿನಗಳು ಇರುವವು ಉಂಟು
ಅರಿಯಬೇಕು ಆಹಾರ ಪದ್ಧತಿ.
ಬಲ್ಲವರಿಂದ ತಿಳಿಯೋ ತಮ್ಮ
ಬಂಗಾರ ಬಾಳು ನಿನ್ನ ಜೀವನ...

**–ಎಸ್.ಎಸ್. ಮುದ್ಲಾಪುರ,** ಕೊಪ್ಪಳ

## ಮೈಕ್ರೋ ನ್ಯೂಸ್

### ಅಸ್ವಸ್ಥ ಯುವಕ ಕಾಣೆ: ಪ್ರಕರಣ ದಾಖಲು

**ಹಂಪಿ ಟೈಮ್ಸ್ ಹೊಸಪೇಟೆ**
ಮಾನಸಿಕ ಅಸ್ವಸ್ಥನಾದ ಹೊಸಪೇಟೆ ತಾಲೂಕಿನ ಕೊಂಡನಾಯಕನಹಳ್ಳಿ ಗ್ರಾಮದ ಎಂ.ಮಲ್ಲಿಕಾರ್ಜುನ (33) ಕಾಣೆಯಾದ ಬಗ್ಗೆ ಹೊಸಪೇಟೆಯ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ (ಗುನ್ನೆ ನಂಬರ್ 154/2024 ಕಲಂ) ಪ್ರಕರಣ ದಾಖಲಾಗಿದೆ.
ತನ್ನ ತಮ್ಮನಾದ ಎಂ.ಮಲ್ಲಿಕಾರ್ಜುನ ಮಾನಸಿಕವಾಗಿ ಅಸ್ವಸ್ಥನಾಗಿದ್ದು ಈತನಿಗೆ ಹೊಸಪೇಟೆಯ ಮಾನಸಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದು 4-2-2024ರಂದು ಮಧ್ಯಾಹ್ನ 1.30ಕ್ಕೆ ಬಟ್ಟೆಗಳನ್ನು ಪ್ಯಾಕ್ ಮಾಡಿಕೊಂಡು ಮನೆಯಿಂದ ಹೋದವನು ಮತ್ತೆ ವಾಪಾಸ್ಸು ಬಂದಿರುವುದಿಲ್ಲ. ಎಲ್ಲಾ ಕಡೆ ನೋಡಿ ಹುಡುಕಾಡಿದ್ದು ಎಲ್ಲಿಯೂ ಕಾಣುತ್ತಿಲ್ಲ ಎಂದು ಕೊಂಡನಾಯಕನಹಳ್ಳಿ ಗ್ರಾಮದ ಎಂ.ಅಮರೇಶ ಅವರು ದೂರು ದಾಖಲಿಸಿದ್ದಾರೆ.

### ಹತ್ತು ಕಟ್ಟಲ್ಲಿ ಒಂದು ಮುತ್ತು ಕಟ್ಟು

# ನಿಂದಾ ಆರಾಮ್ ನೋಡು ಮಾವಾ...

**"ಏಕೇನಾಪಿ ಸುಪುತ್ರೇಣ ವಿದ್ಯಾಯುಕ್ತೇನ**
**ಸಾಧುನಾ। ಆಹ್ಲಾದಿತಂ ಕುಲಂ ಸರ್ವಂ**
**ಯಥಾ ಚಂದ್ರೇಣ ಶರ್ವರಿ?॥"**
**–ಚಾಣಕ್ಯನೀತಿ**



ವಿದ್ಯಾಸಂಪನ್ನನೂ, ಸಾಧು-ಸದ್ಗುಣನೂ ಆದ ಒಬ್ಬ ಮಗನಿದ್ದರೂ ಸಾಕು ತನ್ನ ಕುಲ-ವಂಶ- ಮನೆತನಕ್ಕೆ ಆನಂದವನ್ನು ಕೀರ್ತಿಯನ್ನು ತರುತ್ತಾನೆ ; ಹುಣ್ಣಿಮೆಯ ಚಂದಿರನು ಇಡೀ ಜಗತ್ತಿಗೆ ಹಾಲ್ಬೆಳದಿಂಗಳು ಚೆಲ್ಲಿ ತಂಪನೆರೆವಂತೆ. ಇದನ್ನೇ ನಮ್ಮ ಜನಪದರು ನೂರು ಮಾತ್ನಲ್ಲಿ ಹೇಳೋದನ್ನ ಒಂದೇ ಮಾತಿನಲ್ಲಿ 'ಹಸಿ ಗ್ವಾಡಿಮ್ಯಾಲ ಅಳ್ ಇಟ್ಟಾಂಗ', 'ಕಾದಂಚಿನ ಮ್ಯಾಲ ಅಳ್ ಹುರುದಂಗ', 'ಮಾತಾಡಿದರ ಹೊಟ್ಯಾಗಿನ ಅಳ್ ತಲ್ಯಾಗಿನ ಮಳ್ ಕರಗಂಗ' – 'ಹತ್ತು ಕಟ್ಟಲ್ಲಿ ಒಂದು ಮುತ್ತು ಕಟ್ಟಂತ' ಅರ್ಥಪೂರ್ಣವಾದ ನುಡಿಕಟ್ಟನ್ನು ಕಟ್ಟಿದ್ದಾರೆ. ಈ ಅನುಭವದ ನುಡಿ ನೂರಕ್ಕೆ ನೂರು ಸತ್ಯ ಎನ್ನುವಷ್ಟರಲ್ಲಿಯೇ ಮತ್ತೊಂದು ಮಾತು ನೆನಪಿಗೆ ಬಂತು ನೋಡಿ, 'ಬೆಂಕಿಪೊಟ್ಟಣದಾಗ ಒಂದಾ ಕಡ್ಡಿ ಇರಬಾರ್ದು, ಮನಿಗೆ ಒಬ್ಬನಾ ಮಗಾ ಇರಬಾರ್ದು' ಹೊತ್ತಿದರೆ ಇಡೀ ಜಗವ ಬೆಳಗತ್ತೈತಿ, ಆರಿದರೆ ದೀಪಕ್ಕ ದಿಕ್ಕಿಲ್ಲದಂಗ ಆಗತ್ತೈತಿ ಅಂತ, ಹಾಗೆಂದೇ ಧೈರ್ಯಮಾಡಿ – 'ಹುಟ್ಟಿಸಿದ ದೇವರು ಹುಲ್ಲು ಮೇಯಿಸಾಕಿಲ್ಲ' ಎಂಬ ಹುಂಬುತನದಿ ಹದಿನಾರು ಮಕ್ಕಳನ್ನು ಹೆರುತ್ತಿದ್ದರು ನೋಡಿ ನಮ್ಮ ಪೂರ್ವಜರು, ಅದೇನೋ ಅಂತಾರಲ್ಲ 'ಆರ್ ಹಡದಾಕಿ ಮುಂದ ಮೂರ್ ಹಡದಾಕಿ ಹಂಗಲ್ಲ ಯವ್ವಾ ಹಿಂಗಂತ ಸೋಗು ಮಾಡಿದ್ಲಂತ', 'ಅಜ್ಜಿಗೆ ಕೆಮ್ಮೋದನ್ನ ಮೊಮ್ಮಗಳು ಹೇಳಿಕೊಟ್ಟಂಗ!' ಹೋಗ್ಲಿ ಬಿಡಮ್ಮ ಆ ಮಾತು ಅತ್ಲಾಗಿರಲಿ, 'ಮೂರು ಹೆಣ್ಣಿನ ಮ್ಯಾಲ್ ಒಂದು ಗಂಡು ಹುಟ್ಟಿದರ ಮುತ್ತಂತೆ, ಅದೇ ಮೂರು ಗಂಡಿನ ಮ್ಯಾಲ್ ಒಂದು ಹೆಣ್ಣು ಹುಟ್ಟಿದರ ಆ ಮನೆತನಕ್ಕೆ ಕುತ್ತಂತೆ..!' ಅಂತೂ ಮುತ್ತಿನಂತ ಮಗ್ನಾ ಹೆತ್ತು ಬಿಟ್ಟಿಯಾ 'ಮುತ್ತು, ಮುತ್ತು ಮುತ್ತು.., ಅಂತ ಹೆಸರಿಟ್ಟುಬಿಡು ಅಂತೇಳಿ ಓಣಿಮಂದಿನ ಕರದು ನಾಮಕರಣಾನೇ ಮಾಡಿಬಿಡ್ತಿದ್ದರು.

'ಮೂರು ಹೆಣ್ಣಿನ ಮ್ಯಾಲ್ ಒಂದು ಗಂಡು ಹುಟ್ಟಿದರ ಮುತ್ತಂತೆ' ಎನ್ನುವ ನುಡಿಕಟ್ಟಿನ ಪ್ರಭಾವ ಬರೀ ಹಿಂದುಗಳಲ್ಲಿ ಅಷ್ಟೇ ಅಲ್ಲದೇ ಮುಸ್ಲಿಂ ಸಮುದಾಯದಲ್ಲಿಯೂ ಚಾಲ್ತಿಯಲ್ಲಿರುವುದನ್ನು ಕಾಣಬಹುದಾಗಿದ್ದು, ಈ ಬಗೆಗಿನ ಒಂದು ನೈಜ ಘಟನೆಯ ವಿವರಣೆ ನೀಡಬಯಸುತ್ತೇನೆ – ನನ್ನ ಆತ್ಮೀಯ ವೃತ್ತಿ ಬಾಂಧವರಲ್ಲಿ ಒಬ್ಬರು, [ಹೆಸರು ಬದಲಾಯಿಸಿಲ್ಲ] ಮೆಹಬೂಬ್ ಪಾಶಾ ಅಂತ, ಮೂಲತಃ ಹನುಮಸಾಗರದವರು, ಅವರಿಗೆ ಮೂರು ಹೆಣ್ಣುಮಕ್ಕಳು ಆದರೂ ಕೂಡ ಗಂಡು ಮಗುವಿನ ಮೇಲಿನ ಬಯಕೆ, ನಾಲ್ಕನೆಯದು ಹೆಣ್ಣಾದರೆ! 'ಮರಳಿ ಯತ್ನವ ಮಾಡು...' ಎನ್ನುವ ಧೋರಣೆ ಎಲ್ಲರಂತೆ ಅವರದ್ದು ಕೂಡ, ಸದ್ಯ ದೇವರು ದೊಡ್ಡವನು ಹಾಗಾಗದೆ ಒಂದು ಗಂಡು ಮಗುವನ್ನು ಕರುಣಿಸಿ ಆ ಹೆಣ್ಣನ್ನು ಬಹುಸಂಕಷ್ಟದಿಂದ ಪಾರುಗಾಣಿಸಿದ. ಮನೆಯಲ್ಲಿ ಎಲ್ಲಿಲ್ಲದ ಸಡಗರ ಸಂಭ್ರಮ, 'ಮೂರು ಹೆಣ್ಣಿನ ಮ್ಯಾಲ್ ಒಂದು ಗಂಡು ಹುಟ್ಟಿದರ ಮುತ್ತಂತೆ' ಎಂಬ ಮಾತಿದೆಯೆಲ್ಲ ಅಂತೆಯೇ ಮಗನಿಗೆ ಮುರ್ತುಜಾ ಅಂತ ಹೆಸರು ಇಡೋದು ಅಂತ್ಹೇಳಿ ತೀರ್ಮಾನಿಸಿ, ಅದೇ ಹೆಸರನ್ನು ಇಟ್ಟರು ಕೂಡ, ಇದಕ್ಕೆ ಇಂಬು ನೀಡುವಂತೆ- ಹನುಮಸಾಗರ ಹತ್ತಿರದ ಇಳಕಲ್ ನ ಹಜ್ರತ್ ಸೈಯದ್ ಷಾ ಮುರ್ತುಜಾ ಕ್ವಾದ್ರಿ ದರ್ಗಾ [ಉೂಚಿದಡಿಚಿಣ ಖಥಿಜಜ ಋಚಿಟ ಒಣಡಿಣಣಚಿದಚಿ ಕಿಣಚಿಜಡಿ ಆಚಿಡಿರ್ಚಿ] ಇದೆ, ಆ ಸಂತನ ಹೆಸರಿಗೂ ಸರಿ ಹೊಂದುತ್ತದೆ ಎನ್ನುವ ಧಾರ್ಮಿಕ ಸದ್ಭಾವನೆಯೂ ಇದ್ದೀತು. ಹಾಗೆ ಹುಟ್ಟಿದ ಮಗುವಿಗೆ ಹೆಸರು ಏನೇ ಇಡ್ಲಿ – ಹಿಂದುಗಳಲ್ಲಿ ಮುತ್ತು ಮುತ್ತು ಎಂದೂ, ಮುಸ್ಲಿಂರಲ್ಲಿ ಮುತ್ತಪ್ಪ ಮುತ್ತಪ್ಪ ಎಂದು ಕರೆಯುವ ವಾಡಿಕೆ ಇದೆ. ನಾವಿಂದು ವಿದ್ಯಾವಂತ, ಪ್ರಜ್ಞಾವಂತ, ನಾಗರೀಕ ಸಮಾಜದಲ್ಲಿ ಬದುಕುತ್ತಿದ್ದೇವೆ, ನೂರಲ್ಲ ಸಾವಿರಾರು ಮಕ್ಕಳಿಗೆ ದಾರಿದೀಪ ಎನಿಸಬೇಕಾದ ಶಿಕ್ಷಕರಲ್ಲೂ ಹೆಣ್ಣು – ಗಂಡು ಎಂಬ ತರತಮ ಭಾವ, ಗಂಡು ಮಗುವನ್ನು ಪಡೆಯಲೇಬೇಕೆಂಬ ಗಂಡಿನ ಈ ಹಪಾಹಪಿತನಕ್ಕೆ ಏನನ್ನಬೇಕು?

ಈ ಮೇಲಿನ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿ ಇಲ್ಲಿ ಹೆಣ್ಣಿನ ಬಗೆಗಿನ ಶಿಷ್ಟರ ಹಾಗೂ ಜನಪದರ ನಿಲುವು ಏನಾಗಿದ್ದೀತು..? ಎಂಬುದು ತಿಳಿದು ಬರುತ್ತದೆ. 'ಹೆಣ್ಣುಟ್ಟಿದರೆ ದೇಹಕ್ಕೆ ಅಂಟಿದ ಹುಣ್ಣು' ಎಂದೇ ಭಾವಿಸಲಾಗುತ್ತಿತ್ತು, ಇಂದಿನ ಬದಲಾದ 'ಕಾಲ'ಮಾನದಿ – ಗಂಡು ಮಗನ ಯಾಕ್ ಹಡದಿ ನನ್ನವ್ವಾ? ಮುದ್ದಿನಿಂದ ನೀ ಸಾಕಿದೀ ಕೇಳವ್ವಾ! ಒಂದು ಕಣ್ಣು ಕಣ್ಣಲ್ಲ, ಒಬ್ಬ ಮಗನು ಮಗನಲ್ಲ, ಮಣ್ಣಾಗಿ ಹೋಯ್ತೆ ನಿನ್ನ ಕನಸೆಲ್ಲ! ತಾಯಂದಿರು ಪರಿತಪಿಸುವಂತಾಗಿ 'ಆರತ್ಗೊಬ್ಬ ಮಗಳು ಕಿರುತ್ಗೊಬ್ಬ ಮಗ'ವೆಂಬ ಮನಸ್ಥಿತಿಯೊಂದಿಗೆ ಸ್ತ್ರೀ ಅಸ್ಮಿತೆಯನ್ನು ಕಂಡುಕೊಂಡಳು. ಮುಂದುವರೆದು 'ಹೆಣ್ಣಿರಲಿ ಗಂಡಿರಲಿ ಮನೆಗೊಂದು ಮಗುವಿರಲಿ', 'ಮನೆಗೊಂದು ಮಗು, ಊರಿಗೊಂದು ವನ'ವಿರಲಿ ಎಂಬ ಮಾತೂ ಚಾಲ್ತಿಗೆ ಬಂತು.

ನಮ್ಮಪ್ಪ ಯಾವಾಗ್ಲೂ ತನ್ನ ಸರಿಕರೊಂದಿಗೆ ಅಗಾಗ್ಗ ನಕಲಿ ಮಾಡೋದನ್ನ ಕೇಳಿದೀನಿ..., ನಿಂದಾ ಆರಾಮ್ ನೋಡು ಮಾವಾ, ಎನ್ ಆರಾಮ್ ಬಿಡ್ಲೇ, ಅಲ್ಲೋ ಮಾವಾ, ನಿನಗ ಒಂದಾ ಏಟು ನೋಡು ಗುಡಿ ಕಟ್ಟಿ ಸೇರಿಬಿಡ್ತಿ, ನನಗ ನಾಕು ಏಟು ಬಿದ್ದಮ್ಯಾಲೇನೇ ನಿನ್ನ ಜೊತೆ ಸೇರೋದು ನೋಡು, ಎಷ್ಟು ಮಕ್ಕಳಿದ್ದರೇನು? ನಾಳೆ ಸತ್ತರ ಮೂರು ಹಿಡಿ ಮಣ್ಣು ಹಾಕ್ತಾರೋ ಇಲ್ಲ ಅದನ್ಯಾರು ಕಂಡು ಬಂದಾರ? ; ನಮ್ಮ ಬರಮಪ್ಪ ಅಣ್ಣಂದು ಚೊಲೋ ನೋಡು, ಮಕ್ಕಳು ಒದ್ದು ಹೊರಗ ಹಾಕಿದ್ರೂ ಒಂದೊತ್ತು ಕೂಳ್ ಹಾಕಾಕ, ಸತ್ತರ ಗೂಟಕ್ಕೆ ಬಡ್ದ ಹೆಣದ ಮುಂದು ಕುಂತು ಎದಿ ಎದಿ ಬಡ್ಕೊಂಡು ಅಳಕ ಒಬ್ಬಳು ಮಗಳು ಇದ್ದಾಳೆ ಅಂತ ಸಮಾಧಾನವನ್ನು ಮಾಡಿಕೊಳ್ಳತ್ತಿದ್ದರು. ಅಂತೂ ಅಪ್ಪನ ಎದೆಗೂಡಿನಲ್ಲಿ ಮಗಳು ಜಾಗವ ಪಡೆದಿದ್ದಳು, ಹಾಗೆಂದುಕೊಂಡೇ ಹೆರವರ ಮನೆಯ ಬೆಳಕಾಗಲು, ತನ್ನವರೆಲ್ಲರನ್ನು ತೊರೆದು ತವರುಮನೆ ಹೊಸ್ತಿಲು ದಾಟಿ ಹೊರ ನಡೆದದ್ದು.

'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೆ ಪೊರೆದವಳು, ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು, ಕಣ್ಣು ಕಾಣದ ಗಾವಿಲರು?' ಎಂಬ ಸಂಚಿ ಹೊನ್ನಮ್ಮಳ ಮನದ ಮಾತಿನ ಹಿಂದಿನ ದುಗುಡ ದುಃಖ-ದುಮ್ಮಾನ ಇಂದಿಗೂ ಪ್ರಸ್ತುತ ಅನಿಸುತ್ತೆ ಅಲ್ಲವೇ, ಹೆಣ್ಣು ವಂಶಕ್ಕೆ, ನಾಡಿಗೆ ಕೀರ್ತಿಯನ್ನು ತರಲಾರಳೇ? ಹೆಣ್ಣೆಂದರೆ ಹುಣ್ಣೆ? ಕಣ್ಣಿದ್ದೂ ಕುರುಡಾಗಿ ವರ್ತಿಸುತ್ತಿದೆ ಈ ನಾಗರೀಕ ಸಮಾಜ.

**– ಡಾ. ಯಲ್ಲಮ್ಮ ಕೆ** ಸಹಾಯಕ ಪ್ರಾಧ್ಯಾಪಕರು,
ಜಿ.ವಿ.ಪಿ.ಪಿ. ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಗರಿಬೊಮ್ಮನಹಳ್ಳಿ,

# ಕಣ್ಣ–ಮಣ್ಣ ಕೂಡಲಲ್ಲಿ ಹಾಡು ಕಟ್ಟುವ ಭವದ ಅಗುಳಿ

**ಭವದ ಅಗುಳಿ** ಸಂತೋಷ್ ಅಂಗಡಿಯವರ ಚೊಚ್ಚಲ ಕವನ ಸಂಕಲನ. 'ಭವ' ಶಬ್ದ ಕಿವಿಗೆ ಬೀಳುವುದೇ ತಡ ಅದರ ಜೋಡು ನುಡಿಯಂತಾದ 'ಬಂಧನ' ಶಬ್ದ ಅಪ್ರಯತ್ನವಾಗಿ ನೆನಪಿಗೆ ಬರುತ್ತದೆ. ಅಷ್ಟು ಅವುಗಳ ಬಂಧ ನಮ್ಮ ಪರಂಪರೆಯಲ್ಲಿ ಹಾಸುಹೊಕ್ಕಾಗಿದೆ. ಪಂಪ 'ಬೆಳಗುವೆನಿಲ್ಲಿ ಜಿನಾಗಮಮಂ; ಅಲ್ಲಿ ಲೌಕಿಕಂ' ಎನ್ನುತ್ತಾನೆ. ಶರಣರು 'ಭಕ್ತ' ಕ್ಕೆ ಎದುರಾಗಿ 'ಭವಿ' ಯನ್ನು ಸಂರಚಿಸಿದರು. ಅಲ್ಲಿ ಭಕ್ತ-ಭವಿ ಎಂದು ವಿಂಗಡಿಸಲಾಯಿತು. 'ಭವಿ' ತನಕ್ಕೆ ಮೂಲ ಮನುಷ್ಯರನ್ನು ಸುತ್ತುವರೆದ 'ಮೋಹ ಪಾಶಗಳು'. ಇವು ಹುಟ್ಟುವುದು 'ಅರಿಷಡ್ವರ್ಗ' ಗಳಿಂದ. ಈ ಅರಿಷಡ್ವರ್ಗಗಳಿಂದ ಪಾರಾಗಿ ಮೋಹಪಾಶವನ್ನು ಕಳೆದುಕೊಳ್ಳುವುದೇ 'ಭವಿ' ತನದಿಂದ ಬಿಡುಗಡೆಯಾಗುವುದು. ಆಗ ಭವಿ- ಭಕ್ತನಾಗುತ್ತಾನೆ, ಅಂದರೆ ಶರಣನಾಗುತ್ತಾನೆ. 'ಅರಿದೊಡೆ ಶರಣ, ಮರೆದೊಡೆ ಮಾನವ' ಎನ್ನುತ್ತಾರೆ ಬಸವಣ್ಣನವರು. ಅಲ್ಲಮ ಪ್ರಭುಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ತನ್ನ ತಾನರಿದವಂಗೆ ಗುಹೇಶ್ವರನೆಂಬುದೊಂದು ಕಿಂಚಿತ್' ಎಂದು ಅರಿವಿನ ನೆಲೆಯನ್ನು ವಿಸ್ತರಿಸುತ್ತಾರೆ. ಇಲ್ಲಿ ಭವಿತನ ನೀಗಬೇಕಾದರೆ ಅರಿವೆಂಬ ಬೆಳಕು ಬೇಕು. ಈ ಸಂಗತಿಯನ್ನು ಈ ಸಂಕಲನದ ಶೀರ್ಷಿಕೆ-'ಭವದ ಅಗುಳಿ' ತುಂಬ ಸುಂದರವಾಗಿ- ರೂಪಕಾತ್ಮಕವಾಗಿ ಕಟ್ಟಿಕೊಡುತ್ತದೆ. ಮೋಹಪಾಶ ಮುಸುಕಿದ ಮನಸೆಂಬ ಮನೆಯಲ್ಲಿ ಬಂಧಿಯಾದ ಜೀವಗಳನ್ನು, ಆ ಮನೆಯ ಅಗುಳಿ ಸರಿಸಿ- ಕದ ತೆರೆದಾಗ ಅರಿವೆಂಬ ಬೆಳಕು ಹರಡಿ, ಅದು ನಮ್ಮನ್ನು ನಾವು ಕಾಣಲು ನೆರವೀಯುತ್ತದೆ. ಇದು ಇಲ್ಲಿನ ಪದ್ಯಗಳ ಮೂಲ ದ್ರವ್ಯವಾಗಿದೆ. ಈ ಸಂಗತಿಯನ್ನು ಹಲವಾರು ನವೀನ ಸಂಕೇತ-ರೂಪಕಗಳ ಮೂಲಕ ಕವಿ ಇಲ್ಲಿ ಕಟ್ಟಿಕೊಡುತ್ತಾರೆ.

ಸಂಕಲನದ ಮೊದಲ ಕವಿತೆಯಿಂದಲೇ ನೋಡುವುದಾದರೆ ಕವಿ ಇಲ್ಲಿ ಜೋಗಿಯನ್ನು ಕರೆಯುತ್ತಿರುವುದು 'ಎದೆಯ ಕದವ ತೆರೆದು ನಾದದ ಬೆಳಕನ್ನು' ನೀಡು ಬಾ ಎಂದೇ.

'ಮಣ್ಣು' ಈ ಸಂಕಲನದಲ್ಲಿ ತುಂಬ ಶಕ್ತ ರೂಪಕವಾಗಿ ಮೂಡಿಬಂದಿದೆ. ಅದು ಈ ಸಂಕಲನದ ಮೊದಲ ಕವಿತೆಯಲ್ಲಿ
'ಏಕತಾರಿಯ ತಂತಿಯು
ನೆಲದ ನುಡಿಯನೇ ಹಿಡಿದು
ಒಡಮೂಡಿ
ಪಡಿಮೂಡಿ
ಜೀವ ಕಣ ಕಣವ ಮೀಟುವಂತಾ
ಪದವೊಂದ ಹಾಡು ಬಾರೋ ಜೋಗಿ
ಎಂಬಲ್ಲಿಂದ ಶುರುವಾಗಿ 'ಒಂಟಿಗೊರಳ ಹಾಡು', 'ಕೋಣೆ', 'ಮಾತು ಮೌನದ ಸೆಳಕುಗಳು', 'ನೆಲದ ತುಂಬಾ ಬೆಳದಿಂಗಳ ಹಾಸು', 'ಅರಿವಿನ ಅರಿವೆಯ ಹೊದ್ದವರು', 'ಕಾಲ ಪ್ರಕ್ರಿಯೆ', 'ಬಾ ನೀನು ಮಳೆಯಂತೆ', 'ಮಣ್ಣ ಮ್ಯಾಗಿನ ಮಮಕಾರ', 'ಗಾಜು ಹೂದಾನಿ', 'ಉತ್ಖನನ'.. ಮುಂತಾದ ಕವಿತೆಗಳ ತುಂಬಾ ಆವರಿಸಿದೆ. 'ಮಣ್ಣ ಮ್ಯಾಗಿನ ಮಮಕಾರ' ಕವಿತೆಯಂತೂ ನಮ್ಮ ದೇಶದ ಇಂದಿನ ಕಠೋರ ವಾಸ್ತವವನ್ನು ಶಕ್ತವಾಗಿ ತೆರೆದು ತೋರುತ್ತದೆ.




'ನಿನ್ನ ಕನಸಿನ ಮಂಟಪದೊಳಗೆ', 'ಮಾತು ಬಿಟ್ಟ ದಿನ', 'ಬಾ ನೀನು ಮಳೆಯಂತೆ', 'ಹೊಸ ಜೀವ', 'ನಾಲ್ಕು ಫಲುಕುಗಳು'... ಮೊದಲಾದ ಕವಿತೆಗಳು ವಿರಹದ ಬೇಗೆಯ ಮೂಲಕ ಪ್ರೇಮ ದರ್ಶನಕ್ಕೆ ಹಾತೊರೆಯುತ್ತವೆ. 'ದೇಹದ ತೃಷೆ ತಣಿಸುವ ಸವಾಲಿಗೆ ಸೋತು' ಪದ್ಯ ಅಕ್ಕಮಹಾದೇವಿಯ ವಚನವೊಂದರ ಸಾಲುಗಳ ಮೂಲಕ ಪ್ರಾರಂಭವಾಗಿ, ದೇಹ ಕೇಂದ್ರವಾಗಿರಿಸಿಕೊಂಡು ಮನಸ್ಸು, ಆತ್ಮ, ಜೀವ, ಭಾವ'.. ಮೊದಲಾದವುಗಳ ಹುಡುಕಾಟಕ್ಕೆಳಸುತ್ತದೆ.

'ಖಾಲಿಯಾಗದ ಚಿತ್ರ', 'ಕಾಲ ಪ್ರಕ್ರಿಯೆ', 'ಡ್ರೈವರ್ಷನ್ ಅಹೆಡ್ ಗೋ ಸ್ಲೋ', ..ಮೊದಲಾದ ಕವಿತೆಗಳು ಕನಸು-ನೆನಪುಗಳ ಮೂಲಕ ಬದುಕಿನ ಕಠೋರ ವಾಸ್ತವಗಳನ್ನು ತೆರೆದಿಡುತ್ತವೆ. 'ರಾಮನವಮಿಯ ಸ್ವಗತ' ಕವಿತೆಯಂತೂ ದೇಶದ ಹೃದಯಕ್ಕಂಟಿದ ಗಾಯಗಳನ್ನು ಹಸಿಹಸಿಯಾಗಿ ಮೂಡಿಸುತ್ತದೆ. 'ನವಿಲುಗರಿ', 'ಬಾದಾಮಿಯ ನಟರಾಜನಿಗೆ', 'ಸ್ವಪ್ನ ಚೆಲುವೆ', 'ಮಲ್ಲಿಕಾಳಿಗೆ', 'ಬಾರಿಗೆ ಬಂದ ಪದ್ಯ' ಕವಿತೆಗಳು ವಸ್ತು ಹಾಗೂ ಭಾಷೆಯ ಹೊಸತನದಿಂದ ವಿಶಿಷ್ಟವಾಗಿವೆ. 'ಊದುಗೊಳವಿ' ಹಾಗೂ 'ಅವ್ವನ ಸೀರೆ' ಕವಿತೆಗಳು ತುಂಬಾ ಶಕ್ತವಾಗಿ ಮೂಡಿಬಂದಿವೆ. 'ಎರಡು ಬೆವರ ಹನಿಗಳು', 'ಎಸ್ ಮಂಜುನಾಥ ಪದ್ಯಗಳು', 'ಕಾರಿಗನೂರಿನ ಬೆಳಕು', 'ಲಂಕೇಶ್' ವ್ಯಕ್ತಿ ಚಿತ್ರದ ಪದ್ಯಗಳೂ ಇಲ್ಲಿ ಗಮನ ಸೆಳೆಯುತ್ತವೆ.

ಈ ಸಂಕಲನದ ಕೊನೆಯ ಪದ್ಯ-'ಪ್ರಾರ್ಥನೆ'
ದೇವರೇ
ಸೂಜಿ ಮೊನೆ ಗಾತ್ರದ
ಕಿಂಡಿ ಸಾಕು
ಬೆಳಕಿನೆಸಳೊಂದು
ಕತ್ತರಿಸಿ
ಬದುಕಿನಂಗಳದಲಿ
ಉಯ್ಯಾಲೆ ಆಡಲು
ಎಂದು ಬೆಳಕಿನ ಹಂಬಲದೊಂದಿಗೆ ಮುಗಿಯುತ್ತದೆ.

ಒಟ್ಟಿನಲ್ಲಿ ಇಲ್ಲಿನ ಕವಿತೆಗಳು ಮಣ್ಣು-ಬೆಳಕು ಎರಡರ ಬಗ್ಗೆ ಮಾತಾಡುತ್ತವೆ. ಇಲ್ಲಿನ ಪದ್ಯಗಳು ಬದುಕಿನ ಬಗ್ಗೆ ಮಾತಾಡುತ್ತವೆ. ಮಣ್ಣು ದಯಪಾಲಿಸುವ ಅನ್ನವನ್ನು ಬೇಡುತ್ತವೆ. ಪದ್ಯ ತಾಯಾಗಲಿ ಎಂದು ಕಾತರಿಸುತ್ತವೆ. 'ಕಣ್ಣ-ಮಣ್ಣ ಕೂಡಲಲ್ಲಿ ಹಾಡು ಕಟ್ಟಿತಣ್ಣ' ಎನ್ನುತ್ತಾರೆ ಬೇಂದ್ರೆಯವರು. ಮಣ್ಣು-ಕಣ್ಣು, ಬದುಕು-ಬೆಳಕು, ಸಂಸಾರ-ಆಧ್ಯಾತ್ಮ, ಲೌಕಿಕ-ಅಲೌಕಿಕ ಹೀಗೆ ಈ ಜೋಡಿ ಸಂಗತಿಗಳು ನಮ್ಮ ಪರಂಪರೆಯುದ್ದಕ್ಕೂ ಹರಿದು ಬಂದಿವೆ. ಇದರ ಜೊತೆ ಜೊತೆಗೆ ಬಡವ-ಶ್ರೀಮಂತ, ಉಚ್ಚ-ನೀಚ, ಕರಿ-ಬಿಳಿ, ಗಂಡು-ಹೆಣ್ಣು.. ಮೊದಲಾದ ತರತಮಗಳೂ ಜೊತೆಯಾಗಿವೆ. ಇವುಗಳನ್ನು ಧರ್ಮ-ರಾಜಕೀಯ-ವ್ಯಾಪಾರೀ ಸಂಸ್ಥೆಗಳು ತಮ್ಮ ಶಕ್ತ್ಯಾನುಸಾರ ಸ್ವಾರ್ಥಕ್ಕೆ ಬಳಸಿಕೊಂಡು ಮನುಕುಲವನ್ನು ಉದ್ದಕ್ಕೂ ಕಾಡಿ ಕಂಗೆಡಿಸಿವೆ. ಮನುಕುಲಕ್ಕೆ ಮಾರಕವಾದ ಈ ಕರಾಳ ತರತಮಗಳು ತೊಡೆದು ಪ್ರೀತಿಯ, ಸಮತೆಯ ಮಾನವತೆಯ ಬೆಳಕು ಮೂಡಬೇಕು. ಮಣ್ಣು-ಕಣ್ಣು, ಬದುಕು-ಬೆಳಕು, ಲೌಕಿಕ-ಅಲೌಕಿಕ ಒಂದರೊಳಗೊಂದು ಹಾಸುಹೊಕ್ಕಾಗಿ ಮನುಕುಲವನ್ನು ತಾಯ ಕರುಳಿನಂದದಿ ಕಾಯಬೇಕೆಂಬ ತುಡಿತ ಈ ಸಂಕಲನದ ಕೇಂದ್ರ ಬಿಂದುವಾಗಿದೆ.

ಸಂತೋಷ್ ಅಂಗಡಿಯವರು ತಮ್ಮ ಮೊದಲ ಸಂಕಲನದ ಮೂಲಕವೇ ಗಮನ ಸೆಳೆಯುವ, ವಿಚಾರಕ್ಕೆ ಹಚ್ಚುವ ಕವಿತೆಗಳನ್ನು ನೀಡಿ ಭರವಸೆ ಹುಟ್ಟಿಸಿದ್ದಾರೆ. ಮುಂದಿನ ದಿನಗಳಲ್ಲಿ ಇವರ ಕಾವ್ಯ ಕೃಷಿ ಉತ್ತಮ ಫಸಲು ನೀಡಲೆಂದು ಆಶಿಸುವೆ.

**– ವನಮಾಲ ಕಟ್ಟೇಗೌಡರು**
**ಹೊಸಪೇಟೆ**



ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**18–07–2024 – ಗುರುವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಜ್ಯೇಷ್ಟ |
| ಯೋಗ | : ಬ್ರಹ್ಮ |
| ಕರಣ | : ಭವ |
| ಸೂರ್ಯೋದಯ | : 05:52:49 |
| ಸೂರ್ಯಾಸ್ತ | : 19:13:27 |
| ರಾಹು | : 14:13–15:53 |
| ಯಮಘಂಡ | : 05:53–07:33 |
| ಗುಳಿಕ | : 09:13–10:53 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 17–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1611.07 ಅಡಿ |
| ಒಳ ಹರಿವು | 49522 ಕ್ಯುಸೆಕ್ |
| ಹೊರ ಹರಿವು | 212 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 39.718 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1588.09 ಅಡಿ |
| ಒಳ ಹರಿವು | 5814ಕ್ಯುಸೆಕ್ |
| ಹೊರ ಹರಿವು | 182 ಕ್ಯುಸೆಕ್ |
| ಸಾಮರ್ಥ್ಯ | 9.988 ಟಿಎಂಸಿ |






# ಮದ್ಯದ ಗೀಳಿಗೆ ಕುಟುಂಬಗಳು ತತ್ತರ

## ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯ ಮದ್ಯವರ್ಜನ ಶಿಬಿರದಲ್ಲಿ ಹಫೀಜ್ ಶೇಕ್ ಹೇಳಿಕೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**
ಯಾವ ಮನುಷ್ಯ ಮದ್ಯದ ಗೀಳಿಗೊಳಗಾಗುತ್ತಾನೋ ಅವರ ಕುಟುಂಬಗಳು ನೆಮ್ಮದಿಯನ್ನು ಕಳೆದುಕೊಂಡು ಗೋಳಾಡುತ್ತಿರುತ್ತವೆ ಎಂದು ಪಟ್ಟಣದ ನೋಬೆಲ್ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಹಫೀಜ್ ಶೇಕ್ ಅಭಿಪ್ರಾಯ ಪಟ್ಟರು.

ಧರ್ಮಸ್ಥಳ ಶ್ರೀಮಂಜುನಾಥ ಸ್ವಾಮಿ ದೇಗುಲದ ಆಡಳಿತ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಹಾಗೂ ಹೇಮಾವತಿ ಹೆಗಡೆಯವರ ಮಾರ್ಗದರ್ಶನದಲ್ಲಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಆಡಳಿತ ಮತ್ತು ಬೆಳ್ತಂಗಡಿಯ ಹಾಗೂ ವಿಜಯನಗರ ಜಿಲ್ಲಾ ಅಖಿಲ ಕರ್ನಾಟಕ ಜನಜಾಗೃತಿ ಟ್ರಸ್ಟ್, ಪಾನಮುಕ್ತ ಸಂಘಟನೆಗಳು ಜಂಟಿಯಾಗಿ ಪಟ್ಟಣದ ಮಂಚಮಸಾಲಿ ಸಮುದಾಯಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ 1823ನೇ ಮದ್ಯವರ್ಜನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಮದ್ಯಪಾನರಾಗಲು ಯಾವುದೋ ಕಾರಣ ಬೇಕಿಲ್ಲ. ಅದರ ದಾಸರಾದವರು ಸಮಾಜದಿಂದಲೂ ಹಾಗೂ ಅವರ ಸಂಬಂಧಿಕರಿಂದಲೂ ಅತ್ಯಂತ ಕೀಳುಭಾನೆಗಳಿಂದ ನೋಡುತ್ತಾರೆ. ಆದ್ದರಿಂದ ಪಾನಮುಕ್ತರಾಗಿ ಹೊಸ ಜೀವನ ಕಟ್ಟಿಕೊಳ್ಳುವಂತ ಅವಕಾಶವನ್ನು ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವೆ ಅನನ್ಯ ಎಂದರು.



ಶಿಬಿರದ ಮಾರ್ಗದರ್ಶಕರಾದ ನಾಗೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಮದ್ಯವರ್ಜನ ಶಿಬಿರಗಳು ಮದ್ಯಸವ್ಯಸನಿಗಳಿಗೆ ದಾರಿ ದೀಪವಾಗಿವೆ. ಈಗಾಗಲೇ ರಾಜ್ಯದಲ್ಲಿ 1822 ಶಿಬಿರಗಳು ಯಶಸ್ವಿಯಾಗಿ 1ಲಕ್ಷಕ್ಕೂ ಹೆಚ್ಚುಜನ ಈ ಮದ್ಯವ್ಯಸನದಿಂದ ಮುಕ್ತರಾಗಿದ್ದಾರೆ. ಈ ಶಿಬಿರದಲ್ಲಿ 70ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದು, 8ದಿನಗಳ ಕಾಲ ನಡೆಯುವ ಶಿಬಿರದಿಂದ ಅದರ ಪ್ರತಿಫಲಕ್ಕಾಗಿ ಸಮಾಜ ಮತ್ತು ಮದ್ಯಪಾನಕ್ಕೊಳಗಾದ ಕುಟುಂಬಗಳ ಸದಸ್ಯರು ಎದಿರು ನೋಡುತ್ತಿದ್ದಾರೆ ಎಂದರು.

ಪುರಸಭೆ ಸದಸ್ಯ ಜೋಗಿ ಹನುಮಂತಪ್ಪ, ಮಾಜಿ ಸದಸ್ಯ ಬಾದಾಮಿ ಮೃತ್ಯುಂಜಯ, ಜಿಲ್ಲಾ ನಿರ್ದೇಶಕರಾದ ಸತೀಶ್ ಸೆಟ್ಟಿ ಸೇರಿದಂತೆ ಅನೇಕರು ಮಾತನಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ನವೀನ್ ಕುಮಾರ್, ಶಿಬಿರದ ಸಮಿತಿಯ ಅಧ್ಯಕ್ಷ ಡಿ.ಓಬಳೇಶ, ಗೌರವಾಧ್ಯಕ್ಷ ಕಿನ್ನಾಳ್ ಸುಭಾಷ್, ಶಿವಪ್ಪನಾಯಕ, ಜೆಡಿಎಸ್ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಎಂ.ಗುಂಡಪ್ಪ, ಶಿಲ್ಪಕಲಾ, ಪವಿತ್ರಾ, ಸಿದ್ದೇಶ್ವರ, ನಟರಾಜ್ ಬಾದಾಮಿ, ಯು.ಕೆ.ಕೊಟ್ರೇಶ, ಬಿ.ಎಸ್.ಸುಭಾಷ್, ಬ್ರಹ್ಮಾನಂದ ಗುತ್ತಲ್, ವಿವೇಕ್ ವಿನ್ಸೆಂಟ್ ಪಾಯಾಸ್, ವೈ.ಎ.ನಾಗೇಶ್, ದಿವಾಕರ ಪೂಜಾರ್, ಮಂಜುನಾಥ ಪೂಜಾರಿ, ಹುಚ್ಚಪ್ಪ, ತಾಲೂಕು ವೈದ್ಯಾಧಿಕಾರಿ ಡಾ.ಶಿವರಾಜ್, ಸಹಾಯಕಿ ಶ್ವೇತಾ, ಪಿಎಸ್ಐ ಬಸವರಾಜ್ ಅಡವಿಬಾವಿ, ತಾಲೂಕು ಯೋಜನಾಧಿಕಾರಿಗಳಾದ ಮಂಜುಳ, ಟಿ.ಆರ್.ವಾಣಿ ಮಡಿವಾಳ, ಕ್ಷೇತ್ರ ಮೇಲ್ವಿಚಾರಕರಾದ ಜಿ.ಕೇಶವ, ಎಸ್.ಪ್ರಭು ಮತ್ತಿತರರು ಪಲ್ಗೊಂಡಿದ್ದರು.

# ಭಾವೈಕ್ಯತೆಯ ಮೊಹರಂ ಆಚರಣೆ ಸಂಪನ್ನದ ದೃಶ್ಯಗಳು



ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಸಂಡೂರುಸ್ವಾಮಿ



ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಲ್ಲಿ ಕುಣಿ ಮುಚ್ಚಿತ್ತಿರುವ ಕ್ಷಣ



ಹೊಸಪೇಟೆಯಲ್ಲಿ ಹೊಳೆಗೆ ಹೋಗುವ ಮುನ್ನ ನಗರದಲ್ಲಿ ಸಂಚರಿಸಿದ ಕ್ಷಣ






## ಕೀಟಗಳ ನಿಯಂತ್ರಣಕ್ಕೆ ರೈತರಿಗೆ ಸಲಹೆ

ಮೊದಲ ಪುಟದಿಂದ

ಸ್ಯೆಂಟ್ರಾನಿಲಿಪ್ರೋಲ್ ಶೇ.19.8, ಥೈಯಾಮೆಥೋಕ್ಸಮ್ ಶೇ.19.8 ಎಫ್‌ಎಸ್@ ಮಿಲಿ/ಕೆಜಿ ಅಥವಾ ಕ್ಲೋರಂಟ್ರಾನಿಲಿಪ್ರೋಲ್ ಶೇ.50 ಎಫ್‌ಎಸ್@5.6 ಮಿಲಿ/ಕೆಜಿಯೊಂದಿಗೆ ಬೀಜೋಪಚಾರ ಮಾಡಿ ಬಿತ್ತನೆ ಕೈಗೊಳ್ಳುವುದರಿಂದ 15–20 ದಿನಗಳವರೆಗೆ ಪರಿಣಾಮಕಾರಿಯಾಗಿರುತ್ತದೆ. ಬೆಳೆಯ ಆರಂಭಿಕ ಹಂತದಲ್ಲಿ (30 ದಿನಗಳವರೆಗೆ) ಎಕರೆಗೆ 10 ಪಕ್ಷಿ ಪರ್ಚ್‌ಗಳನ್ನು ನಿರ್ಮಿಸುವುದು. ರಸಗೊಬ್ಬರಗಳನ್ನು ಸಮತೋಲಿತವಾಗಿ ಬಳಸುವುದು. ಕೀಟದ ಮೊಟ್ಟೆಯ ರಾಶಿ ಮತ್ತು ಮರಿಹುಳುಗಳನ್ನು ಕೈಯಿಂದ ಆರಿಸುವುದು ಮತ್ತು ನಾಶಪಡಿಸುವುದು. ಪ್ರತಿ ಎಕರೆಗೆ 15ರಂತೆ ಮೋಹಕ ಬಲೆಗಳನ್ನು ಬಳಸಿ ಗಂಡು ಪತಂಗಗಳನ್ನು ಸಾಮೂಹಿಕ ಬಲೆಗೆ ಬೀಳಿಸಿ ನಾಶಪಡಿಸುವುದು. ಮೊದಲ ಹಂತದ ಕೀಟಗಳನ್ನು ನಿಯಂತ್ರಿಸಲು ಹಾಗೂ ಮೊಟ್ಟೆಯೊಡೆಯುವ ಸಾಮರ್ಥ್ಯವನ್ನು ಕಡಿಮೆ ಮಾಡಲು ಶೇ.5 ಎನ್‌ಎಸ್‌ಕೆಇ/ಅಜಾಡಿರಾಚಿತಿನ್ 1500 ಪಿಪಿಎಂ @5ಎಂಎಲ್.1 ನೀರಿನೊಂದಿಗೆ ಸಿಂಪಡಣೆ ಮಾಡುವುದು. ಶೇ.10 ಕ್ಕಿಂತ ಹೆಚ್ಚು, ಎಲೆಗಳ ಹಾನಿ ಕಂಡು ಬಂದಾಗ ಅಥವಾ 2ನೇ ಮತ್ತು 3ನೇ ಹಂತದ ಕೀಟನ ನಿರ್ವಹಣೆಗೆ ಸ್ಪಿನೇಟೊರಮ್ ಶೇ.11.7 ಎಸ್‌ಸಿ ಅಥವಾ ಕ್ಲೋರಂಟ್ರಾನಿಲಿಪ್ಲೋಲ್ ಶೇ.18.5 ಎಸ್ಸಿ ಥಿಯಾಮೆಥೋಕ್ಸಮ್ ಶೆ.12.6 ಪ್ಲಸ್ ಲಾಂಬ್ಡಾ ಸೈಯಾಲೊತ್ರಿನ್ ಶೇ.9.5 ಜೆಡ್‌ಸಿ ಕೀಟನಾಶಕಗಳನ್ನು ಬಳಸುವುದು. ಬಾಸಿಲಸ್ ಥುರಿಂಜೆನ್ಸಿಸ್ @2ಜಿ/ಲಿಟ್ ಅಥವಾ ಮೆತಾರಿಜಿಯೆಮ್ ಯಾನಿಸೊಪ್ಲಿ @ 5ಜಿ.ಲಿಟ್ ಜೈವಿಕ ಪೀಡೆನಾಶಕಗಳನ್ನು ಸಸ್ಯಗಳ ಸುರುಳಿಗೆ ಸಿಂಪರಣೆ ಮಾಡಬೇಕು. ಪ್ರೌಢಾವಸ್ಥೆಯ ಕೀಟದ ನಿರ್ವಹಣೆಗೆ 10 ಕೆಜಿ ಅಕ್ಕಿ ಹೊಟ್ಟು ಪ್ಲಸ್ 2 ಕೆಜಿ ಬೆಲ್ಲದ ಮಿಶ್ರಣವನ್ನು 2–3 ಲೀಟರ್ ನೀರಿನಲ್ಲಿ 24 ಗಂಟೆಗಳ ಕಾಲ ಹುದುಗಿಸಲು ಇರಿಸಿ. 100 ಗ್ರಾಂ ಥಿಯೋಡಿಕಾರ್ಬ್ ಅನ್ನು ಅರ್ಧ ಗಂಟೆ ಮೊದಲು ಸೇರಿಸಿ ವಿಷ ಆಹಾರವನ್ನು ತಯಾರಿ ಸಸ್ಯಗಳ ಸುರುಳಿಗೆ ಹಾಕಬೇಕು. ಹೆಚ್ಚಿನ ಮಾಹಿತಿಗಾಗಿ ರೈತರು ತಮ್ಮ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಭೇಟಿ ನೀಡಲು ಕೋರಲಾಗಿದೆ ಎಂದು ವಿಜಯನಗರ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.






Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA